ಬೆಲೆ ರೂ.2.50 WPP No. SK/WPP/UDP/81/2012-2014
D.O.P - 15-12-2013 at Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

**Authorised Distributor For :**
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಏಪ್ರಿಲ್ 2014

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-14 ಸಂಚಿಕೆ-4 ಪುಟಗಳು-8 Registered Under No.KA/SK/UDP/1260/2012-2014 Dated from 01-01-2012 to 31-12-2014.

## ಹೆಬ್ಬೂರು ಮಠಾಧೀಶ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳು ಉಡುಪಿಯಲ್ಲಿ

**"ಜನ್ಮದಲ್ಲಿ ಬ್ರಾಹ್ಮಣರಾಗಿ ಜನಿಸಿ ಸದಾಚಾರ ಸಂಪನ್ನರಾಗಿ ಜೀವನ ಸಾರ್ಥಕ್ಯಗೊಳಿಸಿಕೊಳ್ಳಿ, ದೇವರಲ್ಲಿ ಭಕ್ತಿ ಹೆಚ್ಚಿದಂತೆ ಜ್ಞಾನದ ಬೆಳಕೂ ಬೆಳಗುತ್ತದೆ." ಎಂದು ಹೆಬ್ಬೂರು ಘನಪುರಿ ಸಂಸ್ಥಾನ ಶ್ರೀ ಕೋದಂಡಾಶ್ರಮ ಮಠದ ನೂತನ ಪೀಠಾಧಿಪತಿಗಳಾಗಿ ಪೀಠಾರೋಹಣಗೈದ ಬಳಿಕ ಪ್ರಥಮ ಬಾರಿಗೆ ಉಡುಪಿಗೆ ಆಗಮಿಸಿದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರು ನುಡಿದಿದ್ದಾರೆ.**

ಅವರು ಹೆಬ್ಬೂರಿನಿಂದ ಕೊಲ್ಲೂರು ವರೆಗಿನ ತಮ್ಮ ಧಾರ್ಮಿಕ ಪ್ರವಾಸದ ದಾರಿಯಲ್ಲಿ ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ದಿನಾಂಕ 23–03–2014ರಂದು ಉಡುಪಿಯಲ್ಲಿ ಮೊಕ್ಕಾಂ ಇದ್ದು, ಸಂಜೆ 5.30ಕ್ಕೆ ಉಡುಪಿಗೆ ಆಗಮಿಸಿದರು. ವೇದಮೂರ್ತಿ ಪಾವಂಜೆ ವಾಸುದೇವ ಉಪಾಧ್ಯಾಯ ಮತ್ತು ಇತರ ವೈದಿಕರಿಂದ ವೇದಘೋಷದೊಂದಿಗೆ ಶ್ರೀ ಶ್ರೀಗಳಿಗೆ ಪೂರ್ಣಕುಂಭ ಸ್ವಾಗತ ಕೋರಲಾಯಿತು. ಶ್ರೀ ಶಾರದಾ ದೇವಸ್ಥಾನದಲ್ಲಿ ಶ್ರೀ ಶಾರದೆ, ಶ್ರೀ ಮಹಾಗಣಪತಿ ಮತ್ತು ಶ್ರೀ ಶಂಕರರ ದರ್ಶನಗೈದು ಮಂಗಳಾರತಿ ಬೆಳಗಿ ಶ್ರೀ ಶಾರದಾ ಮಂಟಪಕ್ಕೆ ಕರೆತರಲಾಯಿತು. ಸಾಂಪ್ರದಾಯಿಕವಾಗಿ ಸ್ವಾಗತ ಕೋರಿ ಶ್ರೀಗಳಿಗೆ ಫಲಕಾಣಿಕೆ ಅರ್ಪಿಸಲಾಯಿತು.

ತಮ್ಮ ಸಂಜೆಯ ನಿತ್ಯಾನುಷ್ಠಾನವನ್ನು ಮುಗಿಸಿದ ಶ್ರೀ ಶ್ರೀ ಮಾಧವಾಶ್ರಮ ಶ್ರೀಗಳು ಮತ್ತೆ ಸಭಾಪೀಠದಲ್ಲಿ ಆಸೀನರಾದರು. ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ವತಿಯಿಂದ ಹಾಗೂ ಭಕ್ತವೃಂದದವರಿಂದ ಪ್ರತ್ಯಪ್ರತ್ಯೇಕವಾದ ಪಾದ ಪೂಜೆ ನೆರವೇರಿತು.

**ಅಭಿವಂದನಾ ಕಾರ್ಯಕ್ರಮ** : ನಂತರ ನಡೆದ ಸಭಾಕಾರ್ಯಕ್ರಮದಲ್ಲಿ ಪಾವಂಜೆ ಜಗದೀಶ ಉಪಾಧ್ಯಾಯರು ಸ್ವರಚಿತ ಶ್ಲೋಕ ಪಠಣ ಮಾಡಿದರು. ವೇದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿ "ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳು ಸ್ಥಾನಿಕ ಸಮಾಜದವರಾಗಿದ್ದು, ಈ ಬಗ್ಗೆ ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರವಾಗಿದೆ, ನಮ್ಮ ಸಮಾಜಕ್ಕೂ ಒಂದು ಗುರುಪೀಠ ಒಲಿದು ಬಂದಿದ್ದು, ಇದಕ್ಕಾಗಿ ಜಗದ್ಗುರು ಶ್ರೀ ಶಾರದಾ ಪೀಠಾಧೀಶ್ವರ ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸನ್ನಿಧಾನಂಗಳವರಿಗೆ ಅನಂತ ಕೃತಜ್ಞತೆ ಸಲ್ಲಿಸುವುದಲ್ಲದೆ, ಪ್ರಾಜ್ಞರೂ, ಮಹಾಜ್ಞಾನಿಗಳೂ ಆಗಿರುವ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳವರ ಪರ ನಿಷ್ಠೆ-ಗೌರವ ಹೊಂದಬೇಕಾಗಿರುವ ಅಗತ್ಯವಿದೆ. ಈ ಬಗ್ಗೆ ಪ್ರತಿಯೊಬ್ಬ ಸಮಾಜ ಬಾಂಧವರೂ ತಿಳುವಳಿಕೆ ಪಡೆದುಕೊಂಡು ಹೆಬ್ಬೂರಿನ ಶ್ರೀ ಮಠವನ್ನು ತಮ್ಮದೇ ಮಠವೆಂದು ತಿಳಿದು ಅಲ್ಲಿಗೆ ಆಗಾಗ ಭೇಟಿ ನೀಡಿ ಶ್ರೀಗಳಿಂದ ಆಶೀರ್ವಾದ ಮಂತ್ರಾಕ್ಷತೆ ಪಡೆಯಬೇಕಾದುದು ನಮ್ಮ ಕರ್ತವ್ಯ"ವೆಂದು ತಿಳಿಸಿದರು.

ವೇದಬ್ರಹ್ಮಶ್ರೀ ಭವಾನಿಶಂಕರ ಉಪಾಧ್ಯಾಯರು ಶ್ರೀಗಳ ಅಭಿವಂದನಾ ಪತ್ರ ವಾಚಿಸಿದರು. ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಪ್ರಫುಲ್ಲಚಂದ್ರ ರಾವ್, ಕಾರ್ಯದರ್ಶಿ ಅರವಿಂದಕುಮಾರ್, ಕೋಶಾಧಿಕಾರಿ ಕೃಷ್ಣಮೂರ್ತಿರಾವ್ ಜೊತೆಯಾಗಿ ಅಭಿವಂದನಾ ಪತ್ರ, ಫಲ, ಪುಷ್ಪ, ಕಾಣಿಕೆಯನ್ನು ಶ್ರೀಗಳಿಗೆ ಅರ್ಪಿಸಿದರು. ಶ್ರೀ ಮಠದ ವತಿಯಿಂದ ಶ್ರೀ ಸತ್ಯನಾರಾಯಣ ಅವರು ಮಾತನಾಡಿ "ಘನಪುರಿ ಸಂಸ್ಥಾನ ಶ್ರೀ ಕೋದಂಡಾಶ್ರಮ ಮಠದ ಸಂಪೂರ್ಣ ಮಾಹಿತಿ ನೀಡಿ, ಜಗತ್ತಿನಲ್ಲಿಯೇ ಅತಿದೊಡ್ಡ ಶ್ರೀ ಚಕ್ರವು ಇಲ್ಲಿ ಆರಾಧಿಸಲ್ಪಡುತ್ತಿದ್ದು, ಶ್ರೀ ಚಂದ್ರಮೌಳೀಶ್ವರೀ, ಕಾಮಾಕ್ಷಿ, ಶಾರದಾ ಮತ್ತು ಶ್ರೀ ಶಂಕರ ಭಗವತ್ಪಾದರ ನಿತ್ಯ ಆರಾಧನೆ ನೆರವೇರುತ್ತಿದೆ" ಎಂದು ನುಡಿದರು.



ಕೊನೆಯಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಅರವಿಂದಕುಮಾರ್ ಧನ್ಯವಾದವಿತ್ತರು. ಜೊತೆ ಕಾರ್ಯದರ್ಶಿ ಶ್ರೀ ಕೃಷ್ಣಕುಮಾರ್‌ರಾವ್ ಕಾರ್ಯಕ್ರಮ ಸಂಯೋಜನೆ ಮಾಡಿದರು. ಬಳಿಕ ಶ್ರೀಗಳು ಭಕ್ತರೆಲ್ಲರಿಗೂ ಫಲ ಮಂತ್ರಾಕ್ಷತೆ ನೀಡಿದ್ದಲ್ಲದೆ ಪ್ರತಿಯೊಬ್ಬರ ಹೆಸರು , ಊರು ಕೇಳಿ ಪರಿಚಯ ತಿಳಿದುಕೊಂಡದ್ದು ವಿಶೇಷವಾಗಿತ್ತು. ನಂತರ ಆಗಮಿಸಿದ್ದ ಎಲ್ಲ ಭಕ್ತ ಬಾಂಧವರು ಭೋಜನ ಪ್ರಸಾದ ಸ್ವೀಕರಿಸಿದರು.ಜ್ಞಾನಭಾರತಿ(ರಿ)ಯು

3ನೇ ಪುಟಕ್ಕೆ...



### ಯುಗಾದಿ ಶುಭಾಶಯಗಳು

ಎಲ್ಲ ಸಮಾಜ ಬಾಂಧವರಿಗೆ, ಶ್ರೀಶಾರದಾ ಪತ್ರಿಕೆಯ ಅಭಿಮಾನಿಗಳಿಗೆ, ಲೇಖಕರಿಗೆ ಹಾಗೂ ಪತ್ರಿಕೆಯಲ್ಲಿ ಜಾಹೀರಾತನ್ನು ನೀಡಿ ಸಹಕರಿಸಿದ ಎಲ್ಲರಿಗೂ ಯುಗಾದಿ ಶುಭಾಶಯಗಳು.



### ಡಾ| ದಯಾನಂದ ರಾವ್ ಸಾಲ ವಿದ್ಯಾರ್ಥಿವೇತನ ನಿಧಿಗೆ ಕೊಡುಗೆ

ಕಳೆದ ಹಲವಾರು ವರ್ಷಗಳಿಂದ ನಮ್ಮ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ನೆರವಿಗಾಗಿ ನೀಡುತ್ತಿದ್ದ ಸಾಲ ವಿದ್ಯಾರ್ಥಿ ವೇತನಕ್ಕಾಗಿ ಈ ವರ್ಷವೂ ಡಾ| ದಯಾನಂದ ರಾವ್ ಟ್ರಸ್ಟ್ ರೂ.4,00,001ನ್ನು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘಕ್ಕೆ ಕೊಡುಗೆಯಾಗಿ ನೀಡಿದೆ.

ವಿದ್ಯಾರ್ಥಿಗಳ ನೆರವಿಗಾಗಿ ಈ ಸಾಲ ವಿದ್ಯಾರ್ಥಿ ವೇತನವನ್ನು ಪ್ರತಿ ವರ್ಷವೂ ನಮ್ಮ ಸಂಘವು ಅರ್ಹ ವಿದ್ಯಾರ್ಥಿಗಳಿಗೆ ನೀಡುತ್ತಿದ್ದು ನಮ್ಮ ಸಮಾಜದ ವಿದ್ಯಾರ್ಥಿ ಸಮುದಾಯವು ಇದರ ಸದುಪಯೋಗ ಪಡೆದುಕೊಂಡಿದೆ. ಡಾ| ದಯಾನಂದ ರಾವ್ ಟ್ರಸ್ಟ್‌ನ ಈ ಕೊಡುಗೆಯನ್ನು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಿ ಹಾರ್ದಿಕ ಧನ್ಯವಾದವನ್ನು ಅರ್ಪಿಸುತ್ತದೆ. ವಿಶೇಷವಾಗಿ ನಮ್ಮ ಕೇಳಿಕೆಯನ್ನು ಮನ್ನಿಸಿ ಈ ವರ್ಷವೂ ಈ ನಿಧಿಗೆ ಕೊಡುಗೆಯನ್ನು ನೀಡಿರುವ ಮೆನೇಜಿಂಗ್ ಟ್ರಸ್ಟಿ ಶ್ರೀಮತಿ ಮೋಹಿನಿ ದಯಾನಂದ ರಾವ್ ಇವರಿಗೆ ನಮ್ಮ ಕೃತಜ್ಞತೆಗಳು.

–ಅಧ್ಯಕ್ಷರು ಮತ್ತು ಕಾರ್ಯದರ್ಶಿ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ



### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ – 2.

ನಮ್ಮ ಸಂಘದ ಆಶ್ರಯದಲ್ಲಿ

**ಶ್ರೀ ಶಂಕರ ಜಯಂತಿ ಆಚರಣೆಯು**

ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದಲ್ಲಿ
ತಾ.04-05-2014 ಆದಿತ್ಯವಾರ ನೆರವೇರಲಿದೆ.

ಆ ಪ್ರಯುಕ್ತ ಅದೇ ದಿನ ಬೆಳಿಗ್ಗೆ **ಸಾಮೂಹಿಕ ಉಪನಯನ**ವು ನಡೆಯಲಿದೆ.

ಸರ್ವರಿಗೂ ಆದರದ ಸ್ವಾಗತ : – ಕಾರ್ಯದರ್ಶಿ

ಸಾಮೂಹಿಕ ಉಪನಯನದಲ್ಲಿ ಪಾಲ್ಗೊಳ್ಳಲಿರುವ ಆಸಕ್ತ ಸಮಾಜ ಬಾಂಧವರು ವಟುಗಳ ವಿವರಗಳನ್ನು ತಾ.25-04-2014ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್/ಕಾರ್ಯದರ್ಶಿಯವರಿಗೆ ತಿಳಿಸಲು ವಿನಂತಿಸಲಾಗಿದೆ.

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ| ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶಾನುಭಾಗ್, ವಿ.ಪಿ.ನಗರ
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ

## ಚಿಂತನ


ಮನುಷ್ಯ ವಿಜ್ಞಾನದಲ್ಲಿ ಎಷ್ಟೇ ಮುನ್ನಡೆಯನ್ನು ಸಾಧಿಸಿದ್ದರೂ ಕೆಲವೊಮ್ಮೆ ಆ ವಿಚಾರಕ್ಕೆ ಸವಾಲೊಡ್ಡುವ ಪ್ರಸಂಗಗಳೂ ಮನುಕುಲಕ್ಕೆ ಒದಗಿ ಬಂದದ್ದಿದೆ. ಇದಕ್ಕೆ ಉದಾಹರಣೆ ಎಂಬಂತೆ ಕಳೆದ ತಿಂಗಳು ಮಲೇಶ್ಯಾ ದೇಶದಿಂದ ಹೊರಟ ವಿಮಾನ ಕಾಣೆಯಾದ ಪ್ರಕರಣ.

ಜಗತ್ತಿನ ಯಾವುದೇ ಮೂಲೆಯಲ್ಲಿ ನಡೆದ ಸಣ್ಣ ಪುಟ್ಟ ಘಟನೆಗಳನ್ನೂ ಕೂಡಾ ಅದರ ಸತ್ಯಾಸತ್ಯತೆಗಳು ಬಹಿರಂಗ ವಾಗುವುದರೊಂದಿಗೆ ಜಗತ್ತಿನ ಕಣ್ಣಿಗೆ ಕಟ್ಟುವಂತೆ ವಿವರಿಸುವುದು ವಿಜ್ಞಾನದ ಮುನ್ನಡೆಯ ಸಂಕೇತವೆಂದು ಭಾವಿಸ ಲಾಗಿದೆ. ಆದರೆ 239 ಪ್ರಯಾಣಿಕರಿದ್ದ, ಅದರಲ್ಲಿಯೂ ಪ್ರತಿಯೊಬ್ಬರ ಕೈಯಲ್ಲೂ ಅತ್ಯಂತ ತ್ವರಿತ ಸಂಪರ್ಕ ಮಾಧ್ಯಮವಾದ ಚರದೂರವಾಣಿ (ಮೊಬೈಲ್ ಫೋನ್) ಇದ್ದೂ, ಒಂದರ ಮೂಲಕವೂ ಅವರಲ್ಲಿ ಯಾರೊಬ್ಬರನ್ನೂ ಸಂಪರ್ಕಿಸಲಸಾಧ್ಯ ವಾಗುವ ರೀತಿಯಲ್ಲಿ ವಿಮಾನ ಕಣ್ಮರೆಯಾಗಿದೆ. ಜಗತ್ತಿನ ಬಲಾಢ್ಯ-ಮುಂದುವರಿದ ದೇಶಗಳ ಸಹಿತ ಒಟ್ಟು 14 ದೇಶಗಳ 34 ವಿಮಾನಗಳೂ 40 ಹಡಗುಗಳೂ ಜಗತ್ತಿನಾದ್ಯಂತ ಇರುವ ಕಾಡು-ಮೇಡು-ಸಮುದ್ರಗಳನ್ನೆಲ್ಲಾ ಜಾಲಾಡಿದರೂ ವಿಮಾನದ ಸುಳಿವು ಲಭ್ಯವಿಲ್ಲ. (ಇದೀಗ ಈ ಶೋಧನಾ ಕಾರ್ಯವನ್ನು ನಿಲ್ಲಿಸಲಾಗಿದೆ ಎಂಬ ವದಂತಿಯೂ ಇದೆ.)

ಹಾಗಾದರೆ ಮನುಷ್ಯನು ವಿಜ್ಞಾನದ ಮುನ್ನಡೆಯಲ್ಲಿ ಇನ್ನೂ ಸಾಧಿಸಬೇಕಾದುದು ಬಹಳಷ್ಟು ಇದೆ ಎಂದು ತಿಳಿಯಬೇಕೇ?

ಮನುಷ್ಯನಿಗೆ ಸಮಸ್ಯೆ ಬಂದಾಗ ವಿಜ್ಞಾನದ ಸಂಶೋಧನೆಗಳ ಮೂಲಕ ಪರಿಹಾರ ಕಂಡುಕೊಳ್ಳುತ್ತಾನೆ. ಮುಂದೆಯೂ ಇಂತಹ ಸಮಸ್ಯೆಗಳು ಬಂದಾಗ ಏನು ಮಾಡಬೇಕೆಂದು ಯೋಚಿಸಬೇಡವೇ? ವಿಮಾನ ಚಾಲೂ ಸ್ಥಿತಿಯಲ್ಲಿದ್ದಾಗ ವಿಮಾನದ ಪರಿಸ್ಥಿತಿಯನ್ನು ಭೂಮಿಯಲ್ಲಿರುವ ನಿಯಂತ್ರಣ ಕೊಠಡಿಯು ಅದರ ಮಾಹಿತಿ ತಿಳಿಯುವಂತೆ, ಅದು ಸತ್ತಾಗ (ಕಣ್ಮರೆಯಾದಾಗ, ಗೋಚರವಿಲ್ಲದಿರುವಾಗ, ನಾಶವಾದಾಗ) ನಿಯಂತ್ರಣ ಕೊಠಡಿಗೆ ಮಾಹಿತಿ ಸಿಗುವ ವ್ಯವಸ್ಥೆ ತನ್ನಿಂದ ತಾನೇ(ಅಟೋಮೆಟಿಕಲೀ) ಚಾಲೂ ಸ್ಥಿತಿಗೆ ಬರುವಂತಾಗುವ ಬಗ್ಗೆ ಸಂಶೋಧನೆಯನ್ನು ವಿಜ್ಞಾನಿಗಳು ಮಾಡುವರೇ?

# ಕನ್ನಡ ಕವಿಕಾವ್ಯ ಪರಿಚಯ-೧೦ : ಭಕ್ತ ಕವಿ ಕನಕದಾಸರು



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

**ಕೀರ್ತನೆಗಳಲ್ಲದೆ ಕನಕದಾಸರ ಕಾವ್ಯ ಕೃತಿಗಳು**

1 **ಹರಿಭಕ್ತಿಸಾರ :-** ಲಲಿತ ಪದ ಬಂಧದಲ್ಲಿ ಭಕ್ತಿ ತತ್ವದ ಶ್ರೇಷ್ಠತೆಯನ್ನು ಪ್ರತಿಪಾದಿಸುವ, ಭಾಮಿನಿ ಷಟ್ಪದಿಯ, ಕೇವಲ ನೂರಾ ಎಂಟು ಪದ್ಯಗಳಿಂದ ಕೂಡಿದ ಚಿಕ್ಕ ಗ್ರಂಥವಿದು. ಆದರೂ ಭಕ್ತಿಯ ಪಾರಮ್ಯವನ್ನು ಸಾರುತ್ತದೆ. ಇವರ ಕೀರ್ತನೆಗಳೆಲ್ಲವೂ 'ಕಾಗಿನೆಲೆ ಆದಿಕೇಶವ' ಎಂಬ ಅಂಕಿತದಿಂದ ಕೊನೆಗೊಂಡರೆ 'ಹರಿಭಕ್ತಿಸಾರ'ವೂ ಅದೇ ಅಂಕಿತದಲ್ಲಿ ರಚಿಸಲ್ಪಟ್ಟಿದೆ. 'ಗಿಳಿಯು ಮರಿಯನು ತಂದು ಪಂಜರದೊಳಗೆ ಪೋಷಿಸಿ ಕಲಿಸಿ ಮೃದುನುಡಿಗಳನು ಲಾಲಿಸಿ ಕೇಳ್ವ ಪರಿಣತರಂತೆ ನೀ ಯೆನ್ನ' 'ದೀನ ನಾನು ಸಮಸ್ತ ಲೋಕಕೆ ದಾನಿ ನೀನು; ವಿಚಾರಿಸಲು ಮತಿ ಹೀನ ನಾನು, ಮಹಾಮಹಿಮ ಕೈಮಲ್ಯ ಪತಿ ನೀನು' ಎಂದು ಹೇಳಿ ಕನಕದಾಸರು ದೇವನ ಪಾರಮ್ಯವನ್ನು ವಿವರಿಸಿದ್ದಾರೆ. ಮರೆದೆನಭ್ಯುದಯದಲಿ, ನಿನ್ನನು ಮರೆಯೆನಾಪತ್ತಿನಲಿ ಹರಿಯೆಂದೊರಲುವೆನು' ಎಂದು ಹೇಳಿ 'ಸಂಕಟ ಬಂದಾಗ ವೆಂಕಟರಮಣನ ಧ್ಯಾನ' ಎಂಬ ಗಾದೆಯನ್ನು ನೆನಪಿಸಿದ್ದಾರೆ. ಈ ಪುಟ್ಟ ಗ್ರಂಥದ ಎಲ್ಲಾ ಪದ್ಯಗಳೂ ರಕ್ಷಿಸು ನಮ್ಮನನವರತ' ಎಂಬ ಅಂಕಿತದಿಂದ ಕೊನೆಗೊಳ್ಳುತ್ತವೆ.

2. **ಮೋಹನ ತರಂಗಿಣಿ:-** ಸಾಂಗತ್ಯ ಛಂದಸ್ಸಿನಲ್ಲಿ ರಚಿಸಲ್ಪಟ್ಟ 42 ಅಧ್ಯಾಯಗಳಿಂದ ಕೂಡಿದ ಬೃಹದ್ಗ್ರಂಥ ಕೃಷ್ಣಚರಿತೆಯೇ ಇದಾಗಿದೆ. ಇದರಲ್ಲಿ ಅಷ್ಟಾದಶ ವರ್ಣನೆಗಳಿದ್ದು, ಕಾಮದಹನ, ಮಾರಜನನ, ಶಂಬರಾಸುರ ವಧೆ, ರತಿಯ ವಿವಾಹ, ಅನಿರುದ್ಧ ಜನನ, ಬಾಣಾಸುರ ಶಕ್ತಿ ಹರಣ, ಹರಿ-ಹರರ ಕಾಳಗ ಮುಂತಾದ ವಿಷಯಗಳೆಲ್ಲ ಇವೆ. ಈ ಕಾವ್ಯದಲ್ಲಿ ಕನಕದಾಸರು ನರಹರಿ (ಕುಮಾರ ವಾಲ್ಮೀಕಿ),ಕುಮಾರವ್ಯಾಸರನ್ನು ಸ್ಮರಿಸಿದ್ದಾರೆ. ಮನ್ಮಥನ ಮಗ ಅನಿರುದ್ಧನ ಜನನವನ್ನು ಕವಿ 'ಆನಂದ ಸಂವತ್ಸರ ಮಾಘ ಶುದ್ಧ ನವೀನ ಪಂಚಮಿ, ರವಿವಾರ, ಭಾನುವುದಯದ ಸ್ವಾತಿಯು ನಕ್ಷತ್ರದೆ ತಾನುದಿಸಿದ ಗಂಡು ಮಗನು' ಎಂದು ಹೇಳಿ ಪರ್ಯಾಯವಾಗಿ ತನ್ನ ಜನ್ಮದಿನವನ್ನು ತಿಳಿಸಿ, ಮೋಹನ ತರಂಗಿಣಿ ಕಾವ್ಯ ರಚನೆಯ ಕಾಲವನ್ನು ಹೇಳಿದ್ದಾರೆ. 'ಸುಜ್ಞಾನವಧೂಟಿ' ಎಂಬ ಸ್ತ್ರೀಗೆ ಕತೆ ಹೇಳಿದಂತೆ ಈ ಕಾವ್ಯವನ್ನು ರಚಿಸಿದುದರಿಂದ ಇದು ಒಂದು ರೀತಿಯಲ್ಲಿ 'ಕಾಂತಾಸಮ್ಮಿತ' ಕಾವ್ಯವೆನ್ನಬಹುದು. ಕೃತಿವೇಳ್ದ ಕನಕದಾಸೋತ್ತಮ ಕೇಳ್ದವಳತಿ ಸುಜ್ಞಾನವಧೂಟಿ। ಕೃತಿಗೆ ಕರ್ತನು ಕಾಗಿನೆಲೆಯಾದಿ ಕೇಶವ ಕೃತಿಯ ಕೇಳ್ದರೆ ಪುಣ್ಯವಹುದು॥ ಎಂಬುದಾಗಿ ಹೇಳಿ ಕೊಂಡಿದ್ದಾರೆ. ವಿಷ್ಣು ಭಕ್ತರ ಕುರಿತು ತನ್ನ ಗ್ರಂಥದಲ್ಲಿ ಹೇಳುತ್ತಾ, "ಬಲದಲಿ ಹನುಮ, ಜಾಂಬವ, ವಿಭೀಷಣ, ಧ್ರುವ, ನೆಲದಲಿ (ದಾನದಲ್ಲಿ) ಬಲಿ ಪ್ರಹ್ಲಾದ। ಜಲಜೋದ್ಭವ, ಶೌನಕ,ಶುಕ, ವಿದುರ ಕೇವಲ ವಿಷ್ಣು ಭಕ್ತರೊಪ್ಪಿದರು॥" ಎಂದಿದ್ದಾರೆ. ಕನ್ನಡದ ಪ್ರಾಚೀನ 'ಹಾಡುಗಬ್ಬ' ಪ್ರಕಾರವಾದ 'ಸಾಂಗತ್ಯ'ವನ್ನು ಆಯ್ದುಕೊಂಡು ರಚಿಸಲ್ಪಟ್ಟ ಈ ಕೃತಿಯು ತುಂಬ ಹೃದಯಂಗಮವಾಗಿದೆ ಯೆನ್ನಬಹುದು. ಶ್ರೀಮದ್ರಾಮಾಯಣ, ಶಿವಮಹಾಪುರಾಣ, ಶ್ರೀ ವಿಷ್ಣು ಪುರಾಣ, ಶ್ರೀ ಮದ್ಭಾಗವತ ಮುಂತಾದ ಸಂಸ್ಕೃತ ಗ್ರಂಥಗಳು ಈ ಕಾವ್ಯಕ್ಕೆ ಆಕರ ಗ್ರಂಥಗಳು.

3. **ರಾಮಧಾನ್ಯ ಚರಿತ್ರೆ :-** ಕನ್ನಡ ಸಾಹಿತ್ಯದಲ್ಲಿಯೇ ಒಂದು ಅಪೂರ್ವವಾದ ಕೃತಿಯಿದು. ಭಾಮಿನಿ ಷಟ್ಪದಿಯಲ್ಲಿರುವ ಒಂದು ಪುಟ್ಟ ಗ್ರಂಥ 'ನರೆದಲಗ' (ರಾಗಿ) ಎಂಬ ಹೆಸರಿನ ಬಡವರ ಆಹಾರವಾದ ಒಂದು ಚಿಕ್ಕ ಧಾನ್ಯಕ್ಕೂ, ಭತ್ತಕ್ಕೂ ಉಂಟಾದ ಸಂಭಾಷಣೆಯು ಜಗಳದ ರೂಪವನ್ನು ತಾಳಿ ಆಳರಸನಾದ ಮರ್ಯಾದಾ ಪುರುಷೋತ್ತಮ ಶ್ರೀರಾಮ ಚಂದ್ರನಲ್ಲಿಗೆ ದೂರು ಹೋಯಿತು, ಅವನು ಅವುಗಳಿಗೆ ರಾಜಿ ಮಾಡಿಸಿ 'ನರೆದಲಿಗ'ದ ಶ್ರೇಷ್ಠತೆಯನ್ನು ಸಾರಿ, ತನ್ನಿಂದಾಗಿ (ರಾಘವನಿಂದಾಗಿ) ಆ ಧ್ಯಾನ್ಯಕ್ಕೆ 'ರಾಗಿ' ಎಂದು ಹೆಸರಾಗಲಿ ಎಂದು ವರವಿತ್ತು ಕಳುಹಿಸಿದನು. ಇದರಲ್ಲಿ 'ದೇವರು ಭಕ್ತರಾಧೀನ' 'ಭಕ್ತರ ಭಕ್ತ ಎನ್ನುವ ತತ್ವವು ಪ್ರತಿಪಾದಿಸಲ್ಪಟ್ಟಿದೆ, ಇದೊಂದು ಕಾಲ್ಪನಿಕ ಕಥೆಯ ಕಾವ್ಯವು. ರಾವಣಾದಿ ರಕ್ಕಸರ ವಧಾನಂತರ, ಅಗ್ನಿಪರೀಕ್ಷೆಯ ಮೂಲಕವಾಗಿ ಸೀತೆಯನ್ನು ಪರಿಗ್ರಹಿಸಿದ ಶ್ರೀ ರಾಮಚಂದ್ರನು ವಿಭೀಷನನು ವ್ಯವಸ್ಥೆ ಮಾಡಿದ ಪುಷ್ಪಕ ವಿಮಾನವನ್ನೇರಿ ಪರಿವಾರ ಸಮೇತವಾಗಿ ಅಯೋಧ್ಯಾಭಿ ಮುಖವಾಗಿ ಪಯಣಿಸುತ್ತಾನೆ. ಮಾರ್ಗದಲ್ಲಿ ಶ್ರೀ ಭಾರಧ್ವಾಜರ ಆಶ್ರಮದಲ್ಲಿ ತಂಗಿದ್ದಾಗ ಅಲ್ಲಿಯೇ ಇದ್ದ ಭತ್ತ ಮತ್ತು 'ನರೆದಲಗ' (ರಾಗಿ) ಇವುಗಳಲ್ಲಿ ಅರಂಭವಾದ ಮಾತಿನ ಚರ್ಚೆಯು ಜಗಳದ ರೂಪವನ್ನು ತಾಳಿ ಶ್ರೀರಾಮನಲ್ಲಿಗೆ ದೂರು ಹೋಗುವ ತನಕ ಮುಂದುವರಿಯುತ್ತದೆ. 'ಊರಿಗೆ ಮರಳಿದ ನಂತರ ತೀರ್ಮಾನಿಸುತ್ತೇನೆಂದು ಆಶಾಸ್ವನೆಯನ್ನಿತ್ತ ಶ್ರೀ ರಾಮಚಂದ್ರನು, ಪಟ್ಟಾಭಿಷೇಕ ಮಹೋತ್ಸವವೆಲ್ಲ ಮುಗಿದ ಮೇಲೆ ಅಷ್ಟರತನಕ ಸೆರೆಯಲಿದ್ದ ರಾಗಿ-ಭತ್ತಗಳನ್ನು ವಿಚಾರಣೆಗೆ ಗುರಿಮಾಡಿ ದೇವತೆಗಳ ಅಭಿಪ್ರಾಯದಂತೆ 'ರಾಗಿಯೇ ಶ್ರೇಷ್ಠ' ಎಂದು ತೀರ್ಪಿತ್ತನು.

(ಮುಂದುವರಿಯುವುದು.)

## ಪಾವಂಜೆಯಲ್ಲಿ ರಥೋತ್ಸವ

ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯುವ ಜಾತ್ರೆಯ ಪ್ರಯುಕ್ತ ದಿನಾಂಕ 14-04-2014 ರಂದು ಧ್ವಜಾರೋಹಣಗೊಂಡು ದಿನಾಂಕ 18-04-2014ರಂದು ರಥಾರೋಹಣ, ಮಹಾಅನ್ನ ಸಂತರ್ಪಣೆಯು ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಗಳೊಂದಿಗೆ ನೆರವೇರಲಿದೆ. ಭಕ್ತಾದಿಗಳು ಹಾಗೂ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀದೇವರ ಸೇವೆಯಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ, ಶ್ರೀ ಸುಬ್ರಹ್ಮಣ್ಯ ದೇವರ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ದೇವಳದ ಆಡಳಿತ ಮಂಡಳಿಯ ವಿನಂತಿಸಿ ಕೊಂಡಿದೆ.

**ಕವನಗಳು**

### ಕಿವಿಮಾತು

ಹಾಲುಗೆನ್ನಗಳನ್ನು, ಮುಗ್ಧ ಕಣ್ಣುಗಳನ್ನು
ಹವಳದಾ ಎಸಳು ತುಟಿಗಳನು
ಎಂಜಲಾಗಿಸಲು ಹೊರಟ ಶ್ವಾನಗಳಿಗೆ
ಮೊಗ್ಗಲ್ಲೇ ಕೊರೆದು ತಿನ್ನಲೆಳಸುವ ಕೀಟಕ್ಕೆ
ಮಾನ ಕಳೆಯುವ ದುಶ್ಯಾಸನರಿಗೆ, ಹೆದರಿ
ಮುದುರಿ, ಅವಿತು ಕುಳಿತಿರುವೆಯಾ ಚಿನ್ನ?
ಹೆಣ್ಣು ನೀನೆಂದು, ಚಿಪ್ಪೊಳಗಿಟ್ಟು,
ಭೀತಿಯ ಸಂಕೋಲೆ ತೊಡಿಸಿ, ನಿನ್ನವರು
ಮುಸುಕೊಳಗೇ ಉಸಿರ ಕಟ್ಟಿಸುತಿಹರೆ?
ಕೇಳು ಕಿವಿಮಾತ ಕಂದ
ನೀನು ದುರ್ಬಲಳಲ್ಲ, ಆದಿಶಕ್ತಿ,
ಮಾನರಕ್ಷಣೆಗಾಗಿ ಕರೆಯದಿರು ಕೃಷ್ಣನನು
ಆತನೂ ಪರನಾರಿಯರ ಸೆರಗೆಳೆದ ಚೋರ
ಬದುಕನೆದುರಿಸುವ ಸ್ಥೈರ್ಯ
ಆತ್ಮರಕ್ಷಣೆಯ ತಂತ್ರ, ಇದುವೇ
ನಿನ್ನ ಭದ್ರತೆಯ ಕವಚ.

ರಚನೆ : ಅನುಜಾತೆ

### ರುದ್ರ ಮನೋಹರ

ಫಳಫಳ ಹೊಳೆಯುವ ಚೆಂಡುರುಳಿತು
ಕಡಲಿನ ಮಡಿಲೊಳಗೆ
ಜಲ ಬೆಚ್ಚಿತು, ತೆರೆ ಮೊರೆಯಿತು
ಅಲೆಯುಕ್ಕಿತು ಭೋರ್ಗರೆದು
ಸುಳಿ ಸುತ್ತುತ ತಲೆಯೆತ್ತಿತು
ಗಾಳಿಯ ಛೀಳಿಡುವ
ಕೆಂಬಣ್ಣವ ಎರಚಾಡಿತು
ಸಂಜೆಯು ನೀಲಿಯ ನೀರೊಳಗೆ
ಫಳಫಳಿಸಿತು ಕಣ್ಣುಕ್ಕಿತು
ಕೋಲ್ಮಿಂಚಿನ ಸರಮಾಲೆ
ನಿಶೆ ಬೆದರಿತು, ಮುಖ ಮುಚ್ಚಿತು
ಕಾರ್ಗತ್ತಲೆ ಸೆರಗೊಳಗೆ?

ಪ್ರೊ : ಸುಧಾಕರ್ ರಾವ್ ಬೆಳ್ಳೆ



**ಶ್ರೀಮಾತಾ ಇಲೆಕ್ಟ್ರಾನಿಕ್ಸ್**

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ
ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ| ಅಂಬಲಪಾಡಿ ಕೃಷ್ಣ ರಾವ್, ಡಾ| ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ| ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ| ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಶ್ರೀ ಪ್ರಫುಲ್ಲಚಂದ್ರರಾವ್ ಉಡುಪಿ, ಶ್ರೀ ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್, ಯು ಆರವಿಂದ ಕುಮಾರ್ ಮಣಿಪಾಲ

## ಹೆಬ್ಬಾರು ಮಠಾಧೀಶ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳು ಉಡುಪಿಯಲ್ಲಿ



ಕಾರ್ಯದರ್ಶಿ ಶ್ರೀ ಎಸ್.ಎಲ್.ಕಾರ್ಣಿಕ್, ಸಂಘದ ಮಾಜಿ ಅಧ್ಯಕ್ಷ ಶ್ರೀ ಪಾಲಚಂದ್ರರಾವ್, ಶ್ರೀ ಗೋವಿಂದರಾಜ್ ಮಣಿಪಾಲ ಮೊದಲಾದ ಗಣ್ಯರು ಉಪಸ್ಥಿತರಿದ್ದರು. ರಾತ್ರಿ ಶ್ರೀಶಾರದಾ ಮಂಟಪದಲ್ಲಿ ಮೊಕ್ಕಾಂ ಇದ್ದ ಶ್ರೀ ಮಾಧವಾಶ್ರಮ ಸ್ವಾಮಿಗಳವರು ತಮ್ಮ ಕೊಲ್ಲೂರು ಪ್ರವಾಸದ ಈ ಪ್ರಯಾಣದುದ್ದಕ್ಕೂ ಸುಬ್ರಹ್ಮಣ್ಯ, ಪುತ್ತೂರು. ಮಂಗಳೂರು, ಉಡುಪಿ,ಕಿರಿಮಂಜೇಶ್ವರ, ಕೊಲ್ಲೂರು, ಪಡುಬಿದ್ರೆ, ಮಂಗಳೂರು ಮೊದಲಾದೆಡೆ ತಂಗಿದ್ದು ವಿವಿಧ ಸಂಘಟನೆಗಳ ಆತಿಥ್ಯ-ಗೌರವಾರ್ಪಣೆ ಸ್ವೀಕರಿಸಿದರು.

### ಪಡುಬಿದ್ರೆಯಲ್ಲಿ ಅಭಿವಂದನಾ ಸಭೆ

ದಿನಾಂಕ 26- 03- 2014ರಂದು ಹೆಬ್ಬೂರಿನ ಘನಪುರಿ ಸಂಸ್ಥಾನ ಶ್ರೀ ಕೋದಂಡಾಶ್ರಮ ಮಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರು ಪಡುಬಿದ್ರಿಯ ನಮ್ಮ ಸಮಾಜದ ಎರಡು ದೇವಾಲಯಗಳಿಗೆ ಭೇಟಿ ನೀಡಿದರು. ನಮ್ಮ ಸಮಾಜದ ಮೊದಲ ಯತಿಯೆಂಬ ಖ್ಯಾತಿಗೆ ಕಾರಣರಾದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರು ಮೊದಲು ಪಾದೆಬೆಟ್ಟಿನ ಶ್ರೀ ವಿಷ್ಣುಮೂರ್ತಿ ದೇವಸ್ಥಾನಕ್ಕೆ ಭೇಟಿ ನೀಡಿದಾಗ ಶ್ರೀ ದೇವಳದ ವತಿಯಿಂದ ಶ್ರೀ ಶ್ರೀನಿವಾಸ ಶರ್ಮ ದಂಪತಿಗಳು ಸ್ವಾಗತಿಸಿ, ಪಾದಪೂಜೆ ಸಲ್ಲಿಸಿದರು.

ಬಳಿಕ ಉದಯಾದ್ರಿಯ ಶ್ರೀ ಬಾಲ ಗಣಪತಿ – ಪ್ರಸನ್ನ ಪಾರ್ವತಿ ದೇವಳಕ್ಕೆ ಆಗಮಿಸಿದಾಗ ಶ್ರೀಗಳಿಗೆ ಪೂರ್ಣಕುಂಭ ಸ್ವಾಗತ ನೀಡಲಾಯಿತು. ಶ್ರೀಗಳಿಗೆ ಪಾದಪೂಜೆಯ ಬಳಿಕ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳು ಪ್ರಾಸ್ತಾವಿಕವಾಗಿ ಮಾತಾಡುತ್ತಾ ಎಲ್ಲರನ್ನೂ ಸ್ವಾಗತಿಸಿದರು. ಸ್ವಾಮೀಜಿಗಳ ಜೊತೆಯಲ್ಲಿ ಆಗಮಿಸಿದ್ದ ಶ್ರೀ ಸತ್ಯನಾರಾಯಣರವರು ಶ್ರೀ ಕೋದಂಡಾಶ್ರಮ ಮಠದ ಇತಿಹಾಸ, ಮಹಿಮೆಗಳನ್ನು ವರ್ಣಿಸಿದರು. ಶ್ರೀ ಸ್ವಾಮೀಜಿಯವರು ತಮ್ಮ ಅನುಗ್ರಹ ಭಾಷಣದಲ್ಲಿ ಸ್ಥಾನಿಕ ಬ್ರಾಹ್ಮಣ ಸಮಾಜದ ಸ್ಥಾನಮಾನ ಹಾಗೂ ಉಳಿವಿನ ಬಗ್ಗೆ ಎಚ್ಚರಿಕೆ ನೀಡಿದರು. ಮುಂದಿನ ಚಾತುರ್ಮಾಸ್ಯದ ಅವಧಿಯಲ್ಲಿ ಶ್ರೀ ಮಠಕ್ಕೆ ಬರಬೇಕೆಂದು ಆಹ್ವಾನ ನೀಡಿದರು. ಬಳಿಕ ಅನ್ನ ಸಂತರ್ಪಣೆ ನೆರವೇರಿತು. ಶ್ರೀ ಕರುಣಾಕರ ರಾವ್ ಬೆಳ್ಳೆ ಈ ಕಾರ್ಯಕ್ರಮಕ್ಕೆ ಮಾರ್ಗದರ್ಶಕರಾಗಿದ್ದರು

**ಕಿರಿಮಂಜೇಶ್ವರದಲ್ಲಿ ಶ್ರೀ ಮಾಧವಾಶ್ರಮ ಶ್ರೀಗಳು :** ಪೀಠಾರೋಹಣದ ನಂತರ ಪ್ರಥಮ ಬಾರಿಗೆ ಕುಂದಾಪುರ ತಾಲೂಕಿಗೆ ಆಗಮಿಸಿದ ಶ್ರೀ ಹೆಬ್ಬೂರು ಮಠದ ಶ್ರೀ ಮಾಧವಾಶ್ರಮ ಶ್ರೀಗಳನ್ನು ದಿನಾಂಕ 24–03–2014ರಂದು ಸಂಜೆ 4–05 ಘಂಟೆಗೆ ಕಿರಿಮಂಜೇಶ್ವರದಲ್ಲಿ ನಮ್ಮ ಸಮಾಜದ ಪುರೋಹಿತರಾದ ಶ್ರೀ ವೇದಮೂರ್ತಿ ಚಿದಾನಂದ ಶ್ಯಾನುಭೋಗ್ ಇವರು ಪೂರ್ಣಕುಂಭ ಸ್ವಾಗತ, ವೇದಘೋಷ ಹಾಗೂ ವಾದ್ಯ ಘೋಷ ಗಳೊಂದಿಗೆ ತಮ್ಮ ಸ್ವಗೃಹಕ್ಕೆ ಬರಮಾಡಿ ಕೊಂಡರು. ಈ ಸಂದರ್ಭದಲ್ಲಿ ಶ್ಯಾನುಭೋಗ್



■...1ನೇ ಪುಟದಿಂದ

ಕುಟುಂಬದವರು ಮತ್ತು ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಗಣೇಶ ರಾವ್, ಕೋಶಾಧಿಕಾರಿಯಾದ ಶ್ರೀ ಶಂಕರ್ ರಾವ್ ಕಾಳಾವರ, ರವೀಂದ್ರ ಡಿ. ದೊಡ್ಮನೆ ಮತ್ತು ನಮ್ಮ ಸಮಾಜಬಾಂಧವರು ಉಪಸ್ಥಿತರಿದ್ದರು. ನಂತರ ಶ್ಯಾನುಭೋಗ್ ಕುಟುಂಬದವರು ಪೂರ್ವಾಶ್ರಮದಲ್ಲಿ ಮಾಡಿದಂತಹ ಸಾಧನೆಗಳನ್ನು ಮನ ಮುಟ್ಟುವಂತೆ ತಿಳಿಸಿದ ಶ್ರೀ ಶಂಕರ್‌ರಾವ್ ಕಾಳಾವರ ಇವರು ಶ್ರೀಗಳ ಕಿರುಪರಿಚಯವನ್ನು ಮಾಡಿದರು. ನಾವು ನಮ್ಮ ಗುರುಪೀಠವನ್ನು ಹೇಗೆ ಗೌರವದಿಂದ ಕಾಣಬೇಕು ಹಾಗೂ ನಿರಂತರ ಸಂಪರ್ಕದಲ್ಲಿ ಇರಬೇಕು ಮತ್ತು ಸಮಾಜದ ಅಭಿವೃದ್ಧಿಗೆ ಬ್ರಾಹ್ಮಣನ ಪಾತ್ರ ಎಷ್ಟಿದೆ ಅನ್ನುವುದನ್ನು



ಗುರುಪಾದುಕಾ ಪೂಜೆ ನೆರವೇರಿಸಿದರು. ನಂತರ ನಡೆದ ಸಭಾಕಾರ್ಯಕ್ರಮದಲ್ಲಿ "ತಮ್ಮ ಪೂರ್ವಾಶ್ರಮದಲ್ಲಿ ನನಗೆ ವೇದ ಪಾಠವನ್ನು ಬೋಧಿಸಿದ ಗುರುಗಳು ಇವತ್ತು ಶ್ರೀ ಹೆಬ್ಬೂರು ಮಠದ ಪೀಠಾಧೀಶರಾಗಿ ನಮ್ಮ ಮನೆಗೆ ಆಗಮಿಸಿರುವುದು ನನ್ನ ಪೂರ್ವ ಜನ್ಮದ ಸುಕೃತ" ಎಂದು ಶ್ರೀಗಳ ಗುಣಗಾನ ಮಾಡಿದ ವೇದಮೂರ್ತಿ ಚಿದಾನಂದ ಶ್ಯಾನುಭೋಗ್ ಇವರು ಗುರುಗಳನ್ನು ಸ್ವಾಗತಿಸಿದರು. ಶ್ರೀಗಳು ಶ್ರೀಗಳು ತಮ್ಮ ಅನುಗ್ರಹ ಭಾಷಣದಲ್ಲಿ ತಿಳಿಸಿದರು. ಕೊನೆಯಲ್ಲಿ ಶ್ರೀ ಶೇಷಪ್ಪಯ್ಯ ವಂದಿಸಿದರು. ಶ್ರೀಮತಿ ಶಾಂತಾಗಣೇಶ್ ಕಾರ್ಯಕ್ರಮ ನಿರೂಪಿಸಿದರು. ನಂತರ ಶ್ರೀಗಳಿಂದ ಫಲ ಮಂತ್ರಾಕ್ಷತೆ ಪಡೆದ ಸಮಾಜ ಬಾಂಧವರು ಗುರುಧನ್ಯತಾ ಭಾವದಿಂದ ಪುಳಕಿತರಾದರು. ಅಚ್ಚುಕಟ್ಟಾಗಿ ನಡೆದ ಈ ಗುರುವಂದನಾ ಕಾರ್ಯಕ್ರಮವು ಹೃದಯಸ್ಪರ್ಶಿಯಾಗಿತ್ತು.



## ರಾಜ್ಯಮಟ್ಟದ ಶಂಕರಜಯಂತಿ ಸ್ಪರ್ಧೆಗೆ ಪ್ರಬಂಧ ಆಹ್ವಾನ

ಕುಂದಾಪುರ : ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರು ಮಹಾಸ್ವಾಮಿಗಳವರ ಪರಿಪೂರ್ಣ ಆಶೀರ್ವಾದದೊಂದಿಗೆ ಪ್ರತಿವರ್ಷದಂತೆ ಈ ವರ್ಷವೂ ಇಲ್ಲಿನ ಶ್ರೀ ಕುಂದೇಶ್ವರ ದೇವಸ್ಥಾನದಲ್ಲಿ ಶಂಕರ ಜಯಂತ್ಯುತ್ಸವವು ನಡೆಯಲಿದ್ದು, ಅದರ ಅಂಗವಾಗಿ "ಶ್ರೀ ಶಂಕರ ಭಗವತ್ಪಾದರ ಜೀವನ ಮತ್ತು ಸಂದೇಶ" ಕುರಿತು ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಆಸಕ್ತರು ಹತ್ತು ಪುಟಗಳಿಗೆ ಮೀರದಂತೆ ಸಂಸ್ಕೃತ, ಕನ್ನಡ ಅಥವಾ ಇಂಗ್ಲೀಷ್‌ನಲ್ಲಿ ಪ್ರಬಂಧ ಬರೆದು ತಾ.25–04–2014ರ ಒಳಗೆ ತಲುಪುವಂತೆ ಅಧ್ಯಕ್ಷರು; ಶ್ರೀ ಶಂಕರಜಯಂತ್ಯುತ್ಸವ ಸಮಿತಿ; ಶ್ರೀ ಕುಂದೇಶ್ವರ ದೇವಸ್ಥಾನ; ಕುಂದಾಪುರ–576201; ಉಡುಪಿ ಜಿಲ್ಲೆ–' ಇವರಿಗೆ ಕಳುಹಿಸಬೇಕೆಂದು ವಿನಂತಿಸಲಾಗಿದೆ.

ಅಲ್ಲದೆ ಶಾಂಕರ ಸ್ತೋತ್ರ ಗಾಯನ ಸ್ಪರ್ಧೆ, ಅಂತ್ಯಾಕ್ಷರಿ ಸ್ಪರ್ಧೆ ರಸಪ್ರಶ್ನೆ ಸ್ಪರ್ಧೆ, ಚಿತ್ರಲೇಖನ ಸ್ಪರ್ಧೆ ಮತ್ತು ಶ್ರೀ ರಘುನಾಥಸೂರಿ ವಿರಚಿತ 'ಮಾಣಿಕ್ಯಮಂಜರಿ' ವಾಚನ ಸ್ಪರ್ಧೆ–ಇತ್ಯಾದಿಗಳನ್ನು ಏರ್ಪಡಿಸಿದ್ದು ಈ ಕುರಿತು ಸಮಿತಿಯ ಅಧ್ಯಕ್ಷರನ್ನು ಸಂಪರ್ಕಿಸಿ, ಅವರಿಂದ ಹೆಚ್ಚಿನ ಮಾಹಿತಿಗಳನ್ನು ಪಡೆದು ಸ್ಪರ್ಧೆಗಳಲ್ಲಿ ಭಾಗವಹಿಸಬಹುದೆಂದು ತಿಳಸಲಾಗಿದೆ.

## ಶ್ರೀ ಮ.ನಾ ಹೆಬ್ಬಾರರ ಹರಿಕಥೆ ಕಾರ್ಯಕ್ರಮ

ದಿನಾಂಕ: 31–03–2014ನೇ ಸೋಮವಾರ ಪೂರ್ವಾಹ್ನ, ನಿಟ್ಟೆ ಶಿಕ್ಷಣ ಸಮೂಹದ ಮಧ್ಯದಲ್ಲಿರುವ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಚಾಂದ್ರಮಾನ ಯುಗಾದಿಯ ಶುಭಾವಸರದಲ್ಲಿ ಶ್ರೀ ದೇವಳದ ವರ್ಧಂತಿಯ ಪ್ರಯುಕ್ತ ಶ್ರೀ ಹರಿದಾಸ ಮ.ನಾ.ಹೆಬ್ಬಾರರಿಂದ 'ಭಕ್ತ ಚಂದ್ರಹಾಸ' ಎಂಬ ಪುಣ್ಯ ಕಥಾಭಾಗದ ಹರಿಕಥೆ ಕಾರ್ಯಕ್ರಮವು ಜರಗಿತು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ। ಚಿಪ್ಳೂಣ್‌ಕರ್‌ರವರು ಆರಂಭದಲ್ಲಿ ಹರಿದಾಸರಿಗೆ ಹಾರಾರ್ಪಣೆಗೈದರು. ಶ್ರೀ ದಿವಾಕರ ಭಟ್, ಪಾವಂಜೆ ಇವರು ಹರಿದಾಸರನ್ನು, ಪಕ್ಕವಾದ್ಯಗಾರರನ್ನೂ ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು. ಶ್ರೀ ಕೆ. ಶ್ರೀನಿವಾಸರಾಯರು ಹಾರ್ಮೋನಿಯಂನಲ್ಲೂ, ಶ್ರೀ ರಾಮಪ್ರಸಾದ ಕಂಗಿನಾಯ, ಕಬ್ಬಿನಾಲೆ ಇವರು ತಬಲಾದಲ್ಲೂ ಪಕ್ಕವಾದ್ಯಗಾರರಾಗಿ ಸಹಕರಿಸಿದ್ದರು.

## ಗರಿಷ್ಠ ಲಾಭದಲ್ಲಿ ಶ್ರೀ. ಸುಬ್ರಹ್ಮಣ್ಯ ಸಹಕಾರ ಸಂಘ (ರಿ.), ಮಂಗಳೂರು,

"ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.) ಮಂಗಳೂರು ದಿನಾಂಕ 31–03–2014 ರಂದು ಕೊನೆಗೊಂಡ ವರ್ಷದಲ್ಲಿ ತಾನು ಹಾಕಿಕೊಂಡಿರುವ ಗುರಿ ರೂ.12 ಲಕ್ಷವನ್ನು ಮೀರಿಸಿ ರೂ.1712 ಲಕ್ಷಗಳ ಠೇವಣಿ ಸಂಗ್ರಹಿಸಿ ದಾಖಲೆ ನಿರ್ಮಿಸಿದೆ. ಹಾಗೂ ಅಲ್ಲದೇ ರೂ.1400 ಲಕ್ಷ ಸಾಲಗಳ ಸಾಲವನ್ನೂ ವಿತರಿಸಿ 2013–14ನೇ ಸಾಲಿಗೆ ಸಂಘವು ರೂ.25 ಲಕ್ಷಗಳ ನಿವ್ವಳ ಲಾಭವನ್ನೂ ಸಂಪಾದಿಸಿದೆ. ಈ ಪ್ರಗತಿಗೆ ಕಾರಣರಾದ ಎಲ್ಲಾ ಸದಸ್ಯರಿಗೆ ಹಾಗೂ ಸಮಾಜಬಾಂಧವರಿಗೆ ಸಂಘದ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯು ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತಾ ಮುಂದಿನ ವರ್ಷಯೂ ಇನ್ನು ಹೆಚ್ಚು ಪ್ರಗತಿ ಸಾಧಿಸಲು ಎಲ್ಲರ ಸಹಕಾರವನ್ನು ನಿರೀಕ್ಷಿಸುತ್ತೇವೆ" ಎಂದು ಸಂಘದ ಪ್ರಕಟಣೆಯು ತಿಳಿಸಿದೆ.

# ಹೊಸ ಸಹಸ್ರಮಾನದ ಆದರ್ಶ ಪೀಠಾಧಿಪತಿ ಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು



- ಡಾ। ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರು
ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ

ಶೃಂಗೇರಿ ಶ್ರೀ ಶಾರದಾಪೀಠದ ಅವಿಚ್ಛಿನ್ನ ಗುರುಪರಂಪರೆಯ 36ನೇಯ ಅಧಿಪತಿಗಳಾಗಿರುವ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಹೊಸ ಸಹಸ್ರಮಾನದ ಆದರ್ಶ ಪೀಠಾಧಿಪತಿಗಳಾಗಿ ಜನಮಾನಸಕ್ಕೆ ಸನಾತನ ಋಷಿಪರಂಪರೆಯ ಆಧ್ಯಾತ್ಮಿಕ ಬೆಳಕನ್ನು ನೀಡುತ್ತಿದ್ದಾರೆ. ವಿಜ್ಞಾನ ಯುಗದ ದುಷ್ಟತನದ ಮತ್ತು ಸಂಶಯದ ಸುಳಿಯಲ್ಲಿ ಸಿಲುಕಿ, ಜೀವನದ ಗೊತ್ತು-ಗುರಿಗಳನ್ನು ಮರೆತು, ಐಹಿಕ-ಪಾರಲೌಕಿಕಗಳೆರಡನ್ನೂ ನೆನೆಯದೆ, ವ್ಯರ್ಥವಾದ ಯಾಂತ್ರಿಕ ಬದುಕನ್ನು ಸಾಗಿಸುವವರೆಲ್ಲರಿಗೂ ಅವರ ಅನುಗ್ರಹ-ಉಪದೇಶಗಳು ಮಾರ್ಗದರ್ಶಕ.


**ಬಾಲ್ಯ-ಸನ್ಯಾಸ ದೀಕ್ಷೆ**

ಶ್ರೀಭಾರತೀತೀರ್ಥರು ಮೂಲತಃ ಆಂಧ್ರಪ್ರದೇಶದ ನರಸರಾವು ಪೇಟೆ ಎಂಬಲ್ಲಿ ವಾಸರಾಗಿದ್ದ ಪ್ರಸಿದ್ಧ ವೈದಿಕ ವಿದ್ವಾಂಸರ ಮನೆತನದವರು. ವೇ.ಬ್ರ.ಶ್ರೀ ವೆಂಕಟೇಶ್ವರ ಅವಧಾನಿ ಮತ್ತು ಸೌಭಾಗ್ಯವತಿ ಅನಂತ ಲಕ್ಷ್ಮಮ್ಮನವರು ಇವರ ಪೂರ್ವಾಶ್ರಮದ ತಂದೆ-ತಾಯಿಗಳು. 1951ರ ಎಪ್ರಿಲ್ 11 ಅವರ ಜನ್ಮದಿನ ಸೀತಾರಾಮಾಂಜನೇಯಲು ಎಂಬ ನಾಮಾಂಕಿತರಾಗಿದ್ದ ಇವರು ಗರ್ಭಾಷ್ಟಮದಲ್ಲಿ ಉಪನೀತರಾಗಿ, ಹತ್ತನೆಯ ವಯಸ್ಸಿಗಾಗಲೇ ಸಂಸ್ಕೃತದಲ್ಲಿ ನಿರರ್ಗಳವಾಗಿ ಮಾತನಾಡುವ ಸಾಮರ್ಥ್ಯ ಪಡೆದಿದ್ದರು. ಶೃಂಗೇರಿಯ ಹಿಂದಿನ ಪೀಠಾಧಿಪತಿ ಶ್ರೀ ಅಭಿನವ ವಿದ್ಯಾತೀರ್ಥರು ತಮ್ಮ ವಿಜಯಯಾತ್ರೆಯ ಸಂದರ್ಭದಲ್ಲಿ ನರಸರಾವು ಪೇಟೆಗೆ ಆಗಮಿಸಿದ್ದಾಗ ತೀವ್ರವಾದ ಆಸಕ್ತಿಯಿಂದ ಅವರ ದರ್ಶನ ಪಡೆದು, ಸಂಸ್ಕೃತದಲ್ಲಿ ಸಂಭಾಷಿಸಿ, ಅವರ ಸಂಪೂರ್ಣ ಅನುಗ್ರಹಕ್ಕೆ ಪಾತ್ರರಾದರು.

ಅಂದಿನಿಂದಲೇ ಆಧ್ಯಾತ್ಮ ನಿಷ್ಠವಾದ ವಿರಕ್ತ ಜೀವನವನ್ನು ನಡೆಸುತ್ತಿದ್ದ ಇವರು ತಮಗೆ ಮಾರ್ಗದರ್ಶನ ನೀಡುವ ಏಕೈಕ ಗುರುಗಳು ಶ್ರೀಮದಭಿನವ ವಿದ್ಯಾತೀರ್ಥರು ಎಂದು ದೃಢವಾಗಿ ನಂಬಿ, 1966ರಲ್ಲಿ ಉಜ್ಜಯಿನಿಯಲ್ಲಿ ಚಾತುರ್ಮಾಸ್ಯ ಆರಂಭಿಸಿದ್ದ ಗುರುಗಳ ಬಳಿಗೆ ತೆರಳಿ, ಅವರಲ್ಲಿ ಶಾಸ್ತ್ರಾಭ್ಯಾಸ ಆರಂಭಿಸಿದರು. 1968ರಲ್ಲಿ ಗುರುಗಳವರು ಶೃಂಗೇರಿಗೆ ಆಗಮಿಸಿದ ನಂತರ ಗುರುಗಳವರಿಂದ ಮಾತ್ರವಲ್ಲ ಅವರ ಆದೇಶದಂತೆ ಶ್ರೇಷ್ಠವಿದ್ವಾಂಸರಾದ ಗೊಲ್ಲಪೂಡಿ ಕೃಷ್ಣಮೂರ್ತಿ ಶಾಸ್ತ್ರಿಗಳ ಬಳಿ ತರ್ಕಶಾಸ್ತ್ರ, ಶ್ರೀಮಠದ ಇತರ ವಿದ್ವಾಂಸರಿಂದ ವೇದಾಂತ, ಮಿಮಾಂಸಾ, ವ್ಯಾಕರಣ, ಯಜುರ್ವೇದ- ಮುಂತಾದವನ್ನೆಲ್ಲ. ಅಧ್ಯಯನ ಮಾಡಿ, ಗುರುಗಳ ನಿರೀಕ್ಷೆಯ ಮಟ್ಟಕ್ಕೆ ತಂದರು. ಅವರ ಗುರುಭಕ್ತಿ, ಆಚಾರನಿಷ್ಠೆ, ಸೇವಾ ಮನೋಭಾವ- ಇತ್ಯಾದಿಗಳನ್ನು ಗಮನಿಸಿದ ಗುರುಗಳವರು 1974ರ ನವಂಬರ್ 11ರಂದು ಸಂನ್ಯಾಸ ದೀಕ್ಷೆ ನೀಡಿ, ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿ, 'ಭಾರತೀತೀರ್ಥ ಎಂಬ ಯೋಗಪಟ್ಟವನ್ನು ಅನುಗ್ರಹಿಸಿದರು.

ವೇದಶಾಸ್ತ್ರಗಳಲ್ಲಿ ಅಪಾರವೈದುಷ್ಯ ಹೊಂದಿದ್ದ ತಮ್ಮ ಶಿಷ್ಯ ಭಾರತೀತೀರ್ಥರಿಗೆ ಶ್ರೀ ಮಠದ ಸಂಪ್ರದಾಯ, ಆಶ್ರಮೋಚಿತ ನಿಯಮಗಳು- ಇವನ್ನೆಲ್ಲ ಪರಿಚಯಿಸುತ್ತಾ ಭಾರತದಾದ್ಯಂತ ತಮ್ಮೊಡನೆ ಧರ್ಮಯಾತ್ರೆ ಮಾಡಿಸಿ, ಸ್ವಲ್ಪ ಕಾಲದ ನಂತರ ಸ್ವತಂತ್ರವಾಗಿ ಯಾತ್ರೆ ಕೈಗೊಳ್ಳಲು ಅವರನ್ನು ಪ್ರೇರೇಪಿಸಿದರು. 1989ರ ಸೆಪ್ಟೆಂಬರ್ 21ರಂದು ಶ್ರೀ ಅಭಿನವ ವಿದ್ಯಾತೀರ್ಥರು ಮುಕ್ತರಾದ ನಂತರ ಆ ವರ್ಷ ಅಕ್ಟೋಬರ್ 19ರಂದು ಶ್ರೀ ಭಾರತೀತೀರ್ಥರು 36ನೇಯ ಪೀಠಾಧಿಪತಿಗಳಾಗಿ ಪಟ್ಟಾಭಿಷಿಕ್ತರಾದರು.

**ವೇದ-ಶಾಸ್ತ್ರಗಳ ಸಂರಕ್ಷಕರು**



ತಾವು ಸ್ಥಾಪಿಸಿದ ನಾಲ್ಕು ಆಮ್ನಾಯ ಪೀಠಗಳಲ್ಲಿ ತಮ್ಮ ಸ್ಥಾನವನ್ನು ಅಲಂಕರಿಸುವವರು ಹೇಗಿರಬೇಕೆಂಬುದನ್ನು ಆಚಾರ್ಯಶಂಕರರು ತಮ್ಮ 'ಮಹಾನುಶಾಸನ'ದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಅಲ್ಲಿನ ಈ ಶ್ಲೋಕ ಜಗನ್ಮಾನ್ಯರಾದ ಶ್ರೀ ಭಾರತೀತೀರ್ಥರನ್ನೇ ಕುರಿತಂತೆ ಇದೆ: "ಶುಚಿರ್ಜಿತೇಂದ್ರಿಯೋ ವೇದವೇದಾಗಾದಿ ವಿಶಾರದಃ। ಯೋಗಜ್ಞಃ ಸರ್ವಶಾಸ್ತ್ರಜ್ಞಃ ಸ ಮಹಾಸ್ಥಾನ ಮರ್ಹತಿ॥"- 'ನನ್ನ ಸ್ಥಾನವನ್ನು ವಹಿಸಿಕೊಳ್ಳುವವನು ನಿರ್ಮಲನೂ, ಜಿತೇಂದ್ರಿಯನೂ, ವೇದ-ವೇದಾಂಗಗಳು ಹಾಗೂ ಎಲ್ಲ ಶಾಸ್ತ್ರಗಳನ್ನು ಚೆನ್ನಾಗಿ ತಿಳಿದವನು ಮತ್ತು ಯೋಗವನ್ನು ಬಲ್ಲವನೂ ಆಗಿರಬೇಕು' ñ ಎಂಬುದು ಈ ಶ್ಲೋಕದ ಒಟ್ಟು ತಾತ್ಪರ್ಯ. ಭಗವತ್ಪಾದ ಶಂಕರರು ಹೇಳಿರುವ ಈ ಎಲ್ಲಾ ಅರ್ಹತೆಗಳೂ ಸಂಗಮಿಸಿರುವುದು ಶ್ರೀ ಭಾರತೀತೀರ್ಥರಲ್ಲಿ. ನಿರ್ಮಲರೂ, ಜಿತೇಂದ್ರಿಯರೂ, ಬಾಲ್ಯದಿಂದ ಇಂದಿನವರೆಗೂ ವೇದ ಶಾಸ್ತ್ರಗಳ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡು ಅವುಗಳಲ್ಲಿ ಅಪಾರವಾದ ಪಾಂಡಿತ್ಯವನ್ನು ಗಳಿಸಿದವರೂ ಆದ ಅವರಿಗೆ ಶೃಂಗೇರಿಯ ಪೀಠಾಧಿಪತಿಗಳಾಗಿರುವ 'ಪದವಾಕ್ಯ ಪ್ರಮಾಣ ಪಾರಾವಾರ ಪಾರೀಣ' ಎಂಬ ಬಿರುದು ಅನ್ವರ್ಥವಾಗಿದೆ.

ವೇದ-ಶಾಸ್ತ್ರಗಳನ್ನು ಸಂರಕ್ಷಿಸಿದರೆ ಮಾತ್ರ ಸನಾತನ ಧರ್ಮದ ಸಂರಕ್ಷಣೆಯಾಗುತ್ತದೆ ಎಂದು ಭಾವಿಸುವ ಅವರು ಶೃಂಗೇರಿ ಶ್ರೀ ಶಾರದಾಪೀಠದ ಅನೇಕ ಶಾಖಾ ಮಠಗಳಲ್ಲಿ ವೇದ ಶಾಸ್ತ್ರ ಪಾಠಶಾಲೆಗಳನ್ನು ಸ್ಥಾಪಿಸಿದರು. ಶೃಂಗೇರಿಯ ಸದ್ವಿದ್ಯಾಸಂಜೀವಿನೀ ಪಾಠಶಾಲೆ, ಮಹಾಗಣಪತಿ ವಾಕ್ಯಾರ್ಥ ವಿದ್ವತ್ಸಭೆ, ಸುರಸರಸ್ವತೀಸಭಾ, 'ಶಂಕರಕೃಪಾ' ಮೊದಲಾದ ಪತ್ರಿಕೆಗಳು, ಶಂಕರ ಜಯಂತಿಯ ಆಚರಣೆ-ಇವುಗಳಿಗೆಲ್ಲ ಹೊಸ ಆಯಾಮ ನೀಡಿದರು. ಶ್ರೇಷ್ಠ ವಿದ್ವಾಂಸರಿಗೆ ಶ್ರೀಶಾರದಾಪೀಠ ಪ್ರಶಸ್ತಿ, ಪ್ರತಿ ತಿಂಗಳೂ ಸಾವಿರಾರು ಮಂದಿ ವೇದ-ಶಾಸ್ತ್ರ ವಿದ್ವಾಂಸರಿಗೆ ಗೌರವಧನ, ಶ್ರೀಶಂಕರ ಅದ್ವೈತ ಶೋಧ ಕೇಂದ್ರ, ಶ್ರೀ ಶಂಕರ ಸಂಸ್ಕೃತ ವಿದ್ಯಾಲಯ ಮತ್ತು ಕೇಂದ್ರೀಯ ಸಂಸ್ಕೃತ ವಿದ್ಯಾಲಯದ ಸ್ಥಾಪನೆ, ಗ್ರಂಥ ಪ್ರಕಟಣೆ, ಗೀತಾ ಜ್ಞಾನಯಜ್ಞ- ಇವುಗಳಿಗೆಲ್ಲ ವಹಿಸುವ ಮುತುವರ್ಜಿ ಇವರ ವೇದ ಶಾಸ್ತ್ರ ನಿಷ್ಠೆಗೆ ಒಂದು ನಿದರ್ಶನ. ಇಂದಿನ ಅವಶ್ಯಕತೆಗಳನ್ನು ಗಮನಿಸಿರುವ ಶ್ರೀ ಶ್ರೀಗಳವರು ಶೃಂಗೇರಿಯಿಂದ ನೊಯಿಡಾದವರೆಗೆ ಅನೇಕ ಕಡೆ ಶಾಲೆ-ಕಾಲೇಜುಗಳು, ತಂತ್ರಜ್ಞಾನ ಮತ್ತು ವೈದ್ಯಕೀಯ ಸಂಸ್ಥೆಗಳು ಹಾಗೂ ಆಸ್ಪತ್ರೆಗಳನ್ನು ಸ್ಥಾಪಿಸಿ, ಪ್ರೋತ್ಸಾಹಿಸುತ್ತಿದ್ದಾರೆ.

**ಮಾನವೀಯತೆಯ ಸಾಕಾರ ಮೂರ್ತಿ**

ಜಗತ್ತಿನಾದ್ಯಂತ ವ್ಯಾಪಿಸಿರುವ ತಮ್ಮ ಶಿಷ್ಯರನ್ನೆಲ್ಲ ಅನುಗ್ರಹಿಸುತ್ತಿರುವ ಜಗದ್ಗುರುಗಳವರು ವೇದಶಾಸ್ತ್ರ ಸಂಪನ್ನರು ಮಾತ್ರವಲ್ಲ ಶ್ರೇಷ್ಠ ತತ್ತ್ವಜ್ಞಾನಿಗಳು; ತಪೋನುಷ್ಠಾನ ನಿಷ್ಠರು; ಬಹುಭಾಷಾ ಕೋವಿದರು; ಉತ್ತಮ ಕಲಿಗಳು; ಎಲ್ಲಕ್ಕಿಂತ ಹೆಚ್ಚಾಗಿ ಮಾನವೀಯತೆಯ ಸಾಕಾರ ಮೂರ್ತಿಗಳು. ಆದ್ದರಿಂದ ಅವರ ದರ್ಶನ ಭಾಗ್ಯ ದೊರೆತವರು ತಾವು ಅನುಭವಿಸಿದ ಆನಂದವನ್ನು ವರ್ಣಿಸಲು ಪದಗಳೇ ಸಾಲದೆ ಮೂಕರಾಗುತ್ತಾರೆ. ಏಕೆಂದರೆ ಶ್ರೀಗಳವರು ಮಗುವಿನಷ್ಟು ಮುಗ್ಧರು; ಅಪೂರ್ವವೆನ್ನಬಹುದಾದ ಜ್ಞಾಪಕಶಕ್ತಿ ಮತ್ತು ಸಂವಹನ ಕೌಶಲ ಸಂಪನ್ನರು. ಅತ್ಯಂತ ಶಿಸ್ತುಬದ್ಧವಾದ ದಿನಚರಿ ಮತ್ತು ತಪೋನುಷ್ಠಾನಗಳಿಂದ ಎಲ್ಲರ ಮನಸ್ಸನ್ನು ಸೆಳೆಯುವ ಅವರ ಸ್ಮರಣೆ ಮಾತ್ರದಿಂದಲೇ ಅನಿರ್ವಚನೀಯವಾದ ಆನಂದ ಮತ್ತು ಶಾಂತಿಯನ್ನು ಪಡೆಯಲು ಸಾಧ್ಯ.

ಪ್ರತಿನಿತ್ಯ ತಮ್ಮ ದರ್ಶನ ಪಡೆಯಲು ಸಾಲುಗಟ್ಟಿ ಬರುವ ಭಕ್ತ ಸಮೂಹವನ್ನು ಸಾಂತ್ವನದ ಮಾತುಗಳಿಂದ ಆರ್ಶೀರ್ವದಿಸುತ್ತಾರೆ. ರಾಷ್ಟ್ರಪತಿಗಳಿಂದ ಮೊದಲ್ಗೊಂಡು ಬೇರೆ ಬೇರೆ ರಾಜ್ಯದ ಮುಖ್ಯಮಂತ್ರಿಗಳವರೆಗೆ ಅನೇಕ ಮಂದಿ ರಾಜಕೀಯ ನೇತಾರರು, ಕಲಾವಿದರು, ವಿಜ್ಞಾನಿಗಳು,ವಿದ್ವಾಂಸರು ಹೀಗೆ ನಾನಾ ಕ್ಷೇತ್ರಗಳಲ್ಲಿ ಪರಿಣತರು ಜಗದ್ಗುರುಗಳವರ ದರ್ಶನ ಪಡೆದು ಕೃತಾರ್ಥರಾಗುತ್ತಿದ್ದಾರೆ. ಡೆಹ್ರಾಡೂನ್‌ನಿಂದ ಕೋಟೆಕಾರುವರೆಗೆ, ಈಗಂತೂ ಕಡಲಾಚೆಯ ಅಮೇರಿಕಾ, ಕೆನಡಾ-ಮುಂತಾದ ಕಡೆ ವ್ಯಾಪಿಸಿರುವ ನೂರಾರು ಶೃಂಗೇರಿ ಶಂಕರಮಠಗಳ ನೇತಾರರಿಗೆ, ಶ್ರೀಮಠದ ಪ್ರಾಂತೀಯ ಧರ್ಮಾಧಿಕಾರಿ ಗಳಿಗೆ-ಇವರಿಗೆಲ್ಲ ಸೂಕ್ತಮಾರ್ಗದರ್ಶನ ನೀಡಿ, ಸನಾತನ ಧರ್ಮದ ಸಂರಕ್ಷಣೆ ಮತ್ತು ಪ್ರಸಾರ ಕಾರ್ಯಗಳಲ್ಲಿ ಅವರನ್ನು ತೊಡಗಿಸುತ್ತಿದ್ದಾರೆ. ಸರಸವಾದ ಕವಿತೆಗಳನ್ನು ರಚಿಸುವಲ್ಲಿ ಚತುರರಾದ ಅವರು ಸಂಗೀತ ಕ್ಷೇತ್ರಕ್ಕೂ ಅಪಾರ ಕೊಡುಗೆ ನೀಡಿದ್ದಾರೆ. ಭಾರತದ ಪ್ರಮುಖ ಭಾಷೆಗಳಲ್ಲಿ ಅವರು ನೀಡುತ್ತಿರುವ ಪ್ರವಚನಗಳು ಹೃದಯಂಗಮ ವಾಗಿರುತ್ತವೆ. ಅತ್ಯಂತ ಜಟಿಲವಾದ ಆಧ್ಯಾತ್ಮಿಕ ಸಮಸ್ಯೆಗಳನ್ನು ಜನಸಾಮಾನ್ಯ ರಿಗೆ ಅರ್ಥವಾಗುವ ಹಾಗೆ ಹೇಳುವ ಕಲೆ ಅವರಿಗೆ ಕರಗತವಾಗಿದೆ. ಸನಾತನ ಧರ್ಮದ ಸಂರಕ್ಷಣೆ, ಭಾರತೀಯ ಸಂಸ್ಕೃತಿಯ ಹಿರಿಮೆ, ಭಗವತ್ಪಾದ ಶಂಕರರ ವ್ಯಕ್ತಿತ್ವ ಮತ್ತು ಸಂದೇಶ, ಗುರು-ಶಿಷ್ಯರ ಸಂಬಂಧ, ವಿದ್ಯೆಯ ಮಹತ್ತ್ವ, ಜೀವನದ ಸಾರ್ಥಕತೆ, ಧರ್ಮಶ್ರದ್ಧೆ, ದೇವಸ್ಥಾನಗಳ ಅವಶ್ಯಕತೆ, ಸಂಸ್ಕೃತದ ಹಿರಿಮೆ, ದೇವರಲ್ಲಿ ನಂಬಿಕೆ, ಮಹೋನ್ನತರ ಮಹಾಪಥ- ಇತ್ಯಾದಿ ವಿಷಯಗಳ ಕುರಿತು ಅವರು ನೀಡುವ ಪ್ರವಚನಗಳು ಬಹಳ ಪರಿಣಾಮಕಾರಿಗಳಾಗಿವೆ.

**ಸಾಧನೆಗಳ ಸಾಲು**

'ಸ್ವಸ್ವರಾಷ್ಟ್ರ ಪ್ರತಿಷ್ಠಿತ್ಯೈವ ಸಂಚಾರಃ ಸುವಿಧೀಯತಾಮ್' - 'ಸ್ವರಾಷ್ಟ್ರದ ಉನ್ನತಿಗಾಗಿ ಸಂಚಾರವನ್ನು ಮಾಡಬೇಕು' ಎಂಬ ಶ್ರೀ ಶಂಕರಾಚಾರ್ಯರ ಅನುಶಾಸನದಂತೆ ಶ್ರೀಶ್ರೀಗಳವರು ಶೃಂಗೇರಿಯಿಂದ ಕಾಶ್ಮೀರದವರೆಗೆ ಧರ್ಮಯಾತ್ರೆಗಳನ್ನು ಕೈಗೊಂಡಿದ್ದಾರೆ. 2012 ಫೆಬ್ರವರಿ 26ರಿಂದ 2013ರ ಎಪ್ರಿಲ್ 5ರವರೆಗೆ ಕೈಗೊಂಡ ಅವರ ದಕ್ಷಿಣಭಾರತ ವಿಜಯಯಾತ್ರೆ ಇತ್ತೀಚಿನದು . ಕಾಶಿ ರಾಮೇಶ್ವರ, ಕೊಲ್ಲೂರು-ಮೊದಲಾದ ಅನೇಕ ಪುಣ್ಯಕ್ಷೇತ್ರಗಳಲ್ಲಿ ಪುನಃಪ್ರತಿಷ್ಠೆ-ಕುಂಭಾಭಿಷೇಕ-ಅನೇಕ ಯಜ್ಞ ಯಾಗಾದಿಗಳು, ನೂತನ ಶಂಕರಮಠಗಳ ಸ್ಥಾಪನೆ-ಮೊದಲಾದ ನೂರಾರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಎರಡು-ಮೂರು ಬಾರಿ ಚತುರಾಮ್ನಾಯ ಪೀಠಾಧಿಪತಿಗಳ ಸಮ್ಮೇಳನ ನಡೆಸಿ ಇಡೀ ದೇಶಕ್ಕೆ ಧರ್ಮ ಸಂದೇಶ ನೀಡಿದ್ದಾರೆ. ಕರ್ನಾಟಕದ ಎಂಟು ಮಠಗಳ (ಹರಿಹರಪುರ, ಬಾಳೆಕುದ್ರು, ಯಡತೊರೆ, ಹೆಬ್ಬೂರು, ಚಿತ್ತಾಪುರ, ಹಳದೀಪುರ, ಕರ್ಕಿ ಮತ್ತು ಕಟಪಾಡಿ) ತರುಣ ಯತಿಗಳಿಗೆ ಆ ಮಠಗಳ ಶಿಷ್ಯ ಸಮುದಾಯದ ಪ್ರಾರ್ಥನೆಯಂತೆ ಸೂಕ್ತ ಮಾರ್ಗದರ್ಶನ ನೀಡಿ, ಅವರ ಪೀಠಾರೋಹಣ ಸಂದರ್ಭದಲ್ಲಿ ಅನುಗ್ರಹಿಸಿ, ಅಶೀರ್ವದಿಸಿದ್ದಾರೆ. ಈ ದೇಶದ ನಾನಾ ಭಾಗಗಳಲ್ಲಿ ಪ್ರಕೃತಿವಿಕೋಪ ಸಂಭವಿಸಿದಾಗ ನೀಡುತ್ತಿರುವ ನೆರವು, ಅಶಕ್ತರು ಮತ್ತು ಅಂಗವಿಕಲರಿಗೆ ಒದಗಿಸುತ್ತಿರುವ ಸಹಾಯಕ ಉಪಕರಣಗಳು, ಶೃಂಗೇರಿಯ ಸುತ್ತಮುತ್ತಲಿನ ನಾಲ್ಕು ತಾಲೂಕುಗಳಲ್ಲಿನ ಶಾಲಾ ಕಾಲೇಜುಗಳ ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತಭೋಜನ ವ್ಯವಸ್ಥೆ- ಇಂತಹ ಅನೇಕ ಸಾಮಾಜಿಕ ಚಟುವಟಿಕೆಗಳಲ್ಲಿ ಶ್ರೀಶ್ರೀಗಳವರು ವಹಿಸುತ್ತಿರುವ ಕಾಳಜಿ ಅನನ್ಯವಾದುದು.

ಶೃಂಗೇರಿಗಂತೂ ಅವರ ಕೊಡುಗೆ ವಿಶಿಷ್ಟವಾದುದು. ಕುಡಿಯುವ ನೀರಿನ ಸೌಕರ್ಯ, ದತ್ತಿಗ್ರಾಮ ಮತ್ತು ಸ್ವಚ್ಛಗ್ರಾಮ ಯೋಜನೆಗಳು, ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಅನೇಕ ಅತಿಥಿನಿವಾಸಗಳು ಸಕಲ ಸೌಕರ್ಯಗಳನ್ನೊಳಗೊಂಡ 'ಭಾರತೀತೀರ್ಥಪ್ರಸಾದ' ಹೆಸರಿನ ಭೋಜನ ಶಾಲೆ, ಆಧುನಿಕ ತಂತ್ರಜ್ಞಾನವನ್ನು ಬಳಸಿ ನಿರ್ಮಿಸಿದ ಗುರುನಿವಾಸ, ಶಾಲಾಸೌಧ, ಶಂಕರ ಅದ್ವೈತ ಶೋಧಕೇಂದ್ರ. ಶ್ರೀ ಶಂಕರಾಚಾರ್ಯರ ಶಿಲಾಮಯ ದೇವಸ್ಥಾನ, ಮುಗಿತ್ತಾಯ ಹಂತದಲ್ಲಿರುವ 127 ಅಡಿ ಎತ್ತರದ ಪ್ರವೇಶ ಗೋಪುರ- ಹೀಗೆ ಪಟ್ಟಿ ಮಾಡುತ್ತಾ ಹೋದರೆ ಎಣಿಕೆಗೆ ನಿಲುಕದಷ್ಟು ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಚಟುವಟಿಕೆಗಳು ಜಗದ್ಗುರುಗಳವರ ಮಾರ್ಗದರ್ಶನದಲ್ಲಿ ನಡೆದಿವೆ; ನಡೆಯುತ್ತಿವೆ.

ಪರಮೇಷ್ಠಿ ಗುರುಗಳಾದ ಶ್ರೀಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳವರು ಶೃಂಗೇರಿಯಲ್ಲಿ ಸ್ಥಾಪಿಸಿದ ಶ್ರೀಸದ್ವಿದ್ಯಾ ಸಂಜೀವಿನೀ ಪಾಠಶಾಲೆ, ಬೆಂಗಳೂರಿನ ಶಂಕರಮಠ, ಆದಿಶಂಕರರ ಜನ್ಮಭೂಮಿಯಾದ ಕಾಲಟಿಯ ಶ್ರೀಶಂಕರಾಚಾರ್ಯ ಮತ್ತು ಶಾರದಾಂಬಾ ದೇವಸ್ಥಾನ ಇವೆಲ್ಲವುಗಳ ಶತಮಾನೋತ್ಸವವನ್ನು ವಿಜೃಂಭಣೆಯಿಂದ ಅತ್ಯಂತ ಅರ್ಥಪೂರ್ಣವಾಗಿ ನಡೆಸಿದ ಕೀರ್ತಿ ಶ್ರೀಶ್ರೀಗಳವರಿಗೆ ಸಲ್ಲುತ್ತದೆ.

**ಹರಕೆ-ಹಾರೈಕೆ**

ಧರ್ಮನಿರಪೇಕ್ಷತೆಯ ಹೆಸರಿನಲ್ಲಿ ಪವಿತ್ರಭಾರತದ ಅತ್ಯಮೂಲ್ಯ ಸಂಪತ್ತಾದ ಸನಾತನಧರ್ಮ-ಸಂಸ್ಕೃತಿಗಳನ್ನು ಮೂಲೆಪಾಲಾಗಿಸುತ್ತಿರುವ ಈ ದಿನಗಳಲ್ಲಿ ಜಗನ್ಮಾನ್ಯ ಗುರುದೇವ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಅಸಾಧಾರಣಪಾಂಡಿತ್ಯ, ತಪೋಮಹಿಮೆ ಮತ್ತು ನಿಗ್ರಹಾನುಗ್ರಹ ಸಾಮರ್ಥ್ಯಗಳು ಈ ದೇಶಕ್ಕೆ ವಜ್ರಕವಚ; ಅವರ ಅನುಗ್ರಹ ಮಾರ್ಗದರ್ಶನಗಳು ಈ ನೆಲದ ಧರ್ಮ - ಸಂಸ್ಕೃತಿಗಳ ಪುನರುಜ್ಜೀವನಕ್ಕೆ ಅಮೃತಸದೃಶ. ಅವರ ತಪೋಮಯ ಜೀವನ ನಮ್ಮನ್ನು ಪವಿತ್ರಗೊಳಿಸಲಿ; ಅವರ ಮಧುರವಾದ ಉಪದೇಶಗಳು ನಮ್ಮ ಭೌತಿಕಬದುಕನ್ನು ಸುಖಮಯಗೊಳಿಸಲಿ; ನಮ್ಮ ದೇಶವನ್ನು ಮುನ್ನಡೆಸುವ ಎಲ್ಲ ನೇತಾರರಿಗೂ ಅವರು ಸನ್ಮತಿಯನ್ನು ಅನುಗ್ರಹಿಸಲಿ- ಎಂಬುದು ಅವರ 64ನೇ ವರ್ಧಂತ್ಯುತ್ಸವದ ಈ ಪರ್ವಕಾಲದಲ್ಲಿ ನಾವೆಲ್ಲ ಸಲ್ಲಿಸುವ ಹರಕೆ;ಹಾರೈಕೆ.

## ಬಿ.ಜಯರಾಮ್‌ರಾವ್–ಬ್ಯಾಂಕಿನಿಂದ ನಿವೃತ್ತಿ, ವಿದಾಯ




ಸಿಂಡಿಕೇಟ್ ಬ್ಯಾಂಕಿನ ವಿವಿಧ ಶಾಖೆಗಳಲ್ಲಿ 38 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ ಶ್ರೀ ಬಿ. ಜಯರಾಮರಾವ್‌ರವರು ತಾ.29–03–2014ರಂದು ಮುಖ್ಯ ಕಚೇರಿಯ ನಿರೀಕ್ಷಣಾ ವಿಭಾಗದಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದರು. ಅದೇದಿನ ಏರ್ಪಡಿಸಿದ ವಿದಾಯ ಸಮಾರಂಭದಲ್ಲಿ ಬ್ಯಾಂಕಿನ ಮಹಾಪ್ರಬಂಧಕರಾದ ಶ್ರೀ ಪ್ರದೀಪ್ ಕುಮಾರ್ ಸಕ್ಸೇನಾ ಹಾಗೂ ಇತರ ಹಿರಿಯ ಅಧಿಕಾರಿಗಳು ಆಗಮಿಸಿ, ಶ್ರೀ ಜಯರಾಮ ರಾವ್ ಹಾಗೂ ಶ್ರೀಮತಿ ವೀಣಾ ಜಯರಾಮ ರಾವ್ ಅವರಿಗೆ ಆತ್ಮೀಯವಾಗಿ ಸ್ವಾಗತಿಸಿದರು ಹಾಗೂ ಶ್ರೀ.ಬಿ. ಜಯರಾಮ್ ರಾವ್‌ರವರ ಸುದೀರ್ಘ ಸೇವೆಗಾಗಿ ಅಭಿನಂದಿಸಿ ಅವರ ಮುಂದಿನ ನಿವೃತ್ತ ಜೀವನವು ಸುಖಮಯವಾಗಲೆಂದು ಹಾರೈಸಿದರು.

ಶ್ರೀ.ಬಿ.ಜಯರಾಮ ರಾವ್ ಹಲವಾರು ಸಂಘ ಸಂಸ್ಥೆಗಳಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಅಂತಾರಾಷ್ಟ್ರೀಯ ಸಂಸ್ಥೆಯಾದ ಜಯಂಟ್ಸ್‌ನ ಉಡುಪಿ ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಪ್ರಸ್ತುತ ಕರ್ನಾಟಕ ವಲಯದ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಉಡುಪಿ ಸಂಘದಲ್ಲಿ ಸಕ್ರೀಯರಾಗಿರುವ ಶ್ರೀ ಬಿ.ಜಯರಾಮ ರಾವ್‌ರವರು ಆಡಳಿತ ಮಂಡಳಿಯ ಸದಸ್ಯರಾಗಿದ್ದಾರೆ. ಹಾಗೆಯೇ ಪಾದೆಬೆಟ್ಟು ವಿಷ್ಣುಮೂರ್ತಿ ದೇವಳದಲ್ಲಿ ಟ್ರಸ್ಟಿಗಳಾಗಿಯೂ ಸೇವೆಸಲ್ಲಿಸುತ್ತಿರುವ ಶ್ರೀಯುತ ಬಿ.ಜಯರಾಮ ರಾವ್‌ರವರ ನಿವೃತ್ತಿಯ ಜೀವನವು ಸುಖಮಯವಾಗಲಿ ಎಂದು ಶ್ರೀ ಶಾರದಾ ಬಳಗವು ಹಾರೈಸುತ್ತದೆ.

## ಪಡುಬಿದ್ರೆಯಲ್ಲಿ ಅಭಿನಂದನಾ ಸಭೆ



ದಿನಾಂಕ 16–03– 2014ರಂದು ಪಡುಬಿದ್ರೆಯ ಸ್ಥಾನಿಕ ಸಭಾದ ಮಾಸಿಕ ಸಭೆಯು ಎಲ್ಲೂರಿನ ವೈ.ವಿ.ಸುಬ್ಬರಾವ್ ಇವರ ನೂತನ ಗೃಹ 'ಶ್ರೀ ಧವಳ' ದಲ್ಲಿ ನಡೆಯಿತು. ಸಂಘದ ನಿರ್ದೇಶಕರಾದ ಮುಂಡ್ಕೂರು ವಿದ್ಯಾವರ್ಧಕ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀ ವೈ.ಸುದರ್ಶನರಾವ್ ಇದೀಗ ಅದೇ ಕಾಲೇಜಿನ ಪ್ರಾಂಶುಪಾಲರಾಗಿ ಪದೋನ್ನತಿ ಪಡೆದು ಅಧಿಕಾರ ಸ್ವೀಕರಿಸಿದ್ದು, ಅವರನ್ನು ಈ ಸಭೆಯಲ್ಲಿ ಅಭಿನಂದಿಸಲಾಯಿತು. ಅಲ್ಲದೆ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಸುದೀರ್ಘ ಸೇವೆಸಲ್ಲಿಸಿ ನಿವೃತ್ತರಾದ ಸಂಘದ ಕೋಶಾಧಿಕಾರಿ ಶ್ರೀ ಅರವಿಂದ ರಾವ್ ಇವರನ್ನು ಗೌರವಿಸಲಾಯಿತು.

ವರದಿ : **ಸೀತಾದೇವಿ ಭಾಸ್ಕರರಾವ್.**

## ಶ್ರೀ ವೈ.ಮೋಹನ್‌ರಾಯರ ಕಥಾ ಸಂಕಲನ ಬಿಡುಗಡೆ

ವಿಶ್ರಾಂತ ಉಪನ್ಯಾಸಕರಾದ ಶ್ರೀ ವೈ.ಮೋಹನರಾಯರು ಬರೆದ "ಎಂದೆಂದೂ ಮುಗಿಯದ ಕಥೆ" ಕಥಾ ಸಂಕಲನವನ್ನು ದಿನಾಂಕ 24–03–2014ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಉದಯವಾಣಿಯ ಹಿರಿಯ ಉಪಸಂಪಾದಕರಾದ ಶ್ರೀ ನಿತ್ಯಾನಂದ ಪಡ್ರೆಯವರು ಬಿಡುಗಡೆಗೊಳಿಸಿದರು. ಹಿರಿಯ ವಿಮರ್ಶಕರಾದ ಶ್ರೀ ಎ.ಈಶ್ವರಯ್ಯ, "ಸುಹಾಸಂ" ಸ್ಥಾಪಕ ಅಧ್ಯಕ್ಷರಾದ ಶ್ರೀ ಕೆ ವಿ ಶ್ರೀನಿವಾಸರಾವ್ , ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಪಾಲಚಂದ್ರರಾವ್, ಶ್ರೀ ಸಿ.ಎಸ್.ರಾವ್ ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದು ಶುಭ ಹಾರೈಸಿದರು. ಪುಸ್ತಕದ ಲೇಖಕರಾದ ಶ್ರೀ ವೈ.ಮೋಹನರಾಯರು ಎಲ್ಲರನ್ನು ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿ, ಈ ಕೃತಿಯನ್ನು ಅಗಲಿದ ತನ್ನ ಧರ್ಮಪತ್ನಿ ಶ್ರೀಮತಿ ಉಷಾಮೋಹನ್‌ರಾವ್ ಅವರಿಗೆ ಅರ್ಪಿಸುತ್ತೇನೆ ಎಂದು ಹೇಳುತ್ತಾ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು. ಅಲ್ಲದೆ ಆ ದಿನ ಆಗಮಿಸಿದ ಎಲ್ಲ ಬಂಧುಗಳಿಗೆ ಕೃತಿಯನ್ನು ಉಚಿತವಾಗಿ ಹಂಚಿದರು.

ಮೊದಲಿಗೆ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಡಾ। ಎಚ್.ನಿರಂಜನ್ ಭಟ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ದಿವಂಗತ ಉಷಾರವರ ಬಗ್ಗೆ ಸಮಾಜಬಾಂಧವರ ಪರವಾಗಿ ಕೃಷ್ಣಕುಮಾರ್ ರಾವ್ ಮಟ್ಟು, ವೇಣುಗೋಪಾಲ್ ರಾವ್ ಅಂಬಲಪಾಡಿ ಮಾತನಾಡಿದರು.

## ಶ್ರೀ ಕೆ. ಭಾಗ್ಯಚಂದ್ರ ರಾವ್ ಕ್ಯೊಕುಡೆ ಇವರಿಗೆ ಸನ್ಮಾನ



ಶ್ರೀ ಕೆ. ಭಾಗ್ಯಚಂದ್ರ ರಾವ್ ಕ್ಯೊಕುಡೆ (ದಿ। ಕ್ಯೊಕುಡೆ ವೆಂಕಟ್ರಾಯರ ಪುತ್ರ) ಇವರು ಅದಮಾರು ಮಠದ ಪಡುಬಿದ್ರಿಯ ಎಸ್.ಬಿ.ವಿ.ಪಿ. ಪ್ರಾಥಮಿಕ ಶಾಲೆಯಲ್ಲಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿ ವಿವಿಧ ಸರಕಾರಿ ಶಾಲೆಗಳಲ್ಲಿ ಸೇವೆ ಸಲ್ಲಿಸಿ ಚಿತ್ರಾಪು ಹೈಸ್ಕೂಲ್‌ಗೆ ಭಡ್ತಿಯನ್ನು ಪಡೆದುಕೊಂಡರು. ನಂತರ ಮೂಡುಶೆಡ್ಡೆ ಮಾದರಿ ಶಾಲೆಗೆ, ಅಲ್ಲಿಂದ ವಿದ್ಯಾ ಇಲಾಖೆಯ ಆದೇಶದಂತೆ ಸಮೂಹ ಶಿಕ್ಷಣಾಧಿಕಾರಿಯಾಗಿ, ನಂತರ ವಿವಿಧ ಹೈಸ್ಕೂಲ್‌ಗಳಲ್ಲಿ ಮುಖ್ಯ ಶಿಕ್ಷಕರಾಗಿ ನಿಯೋಜನೆಗೊಂಡು ಇದೇ ತಾ.31-03-2014 ನಿವೃತ್ತಿ ಹೊಂದಿದರು. ಸತ್ಯ, ನಿಷ್ಠೆ ಪ್ರಾಮಾಣಿಕತೆಗಳನ್ನು ಮೈಗೂಡಿಸಿಕೊಂಡು ಎಲ್ಲರೊಡನೆ ಬೆರತು ವಿದ್ಯಾರ್ಥಿಗಳ ಬದುಕನ್ನು ರೂಪಿಸುವ ಅಪರೂಪದ ಶಿಕ್ಷಕರಲ್ಲಿ ಇವರು ಒಬ್ಬರು. ಶ್ರೀ ಕೆ. ಭಾಗ್ಯಚಂದ್ರ ರಾವ್ ಕ್ಯೊಕುಡೆ ಇವರ ಸೇವೆಯನ್ನು ಗುರುತಿಸಿ ನಿವೃತ್ತಿಯ ಸಮಯದಲ್ಲಿ ಸಾರ್ವಜನಿಕವಾಗಿ ಸನ್ಮಾನಿಸಲಾಯಿತು.

## ಪ್ರತಿಭಾ ಪುರಸ್ಕಾರ : ರಂಜನ್ ಬಿ.ಯು.



ಶ್ರೀರಂಗಪಟ್ಟಣದಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ಮತ್ತು ಶ್ರೀ ಉಮೇಶ್ ಕುಮಾರ್ ದಂಪತಿಗಳ ಪುತ್ರ ಶ್ರೀ ರಂಜನ್ ಬಿ ಯು ಭಾರತ ಸರಕಾರ ಮತ್ತು ಸ್ವಾಮಿ ರಾಮಕೃಷ್ಣಮಠದ ಸಹಯೋಗದಲ್ಲಿ ಸ್ವಾಮಿ ವಿವೇಕಾನಂದರ 150ನೇ ವರ್ಷದ ಅಂಗವಾಗಿ ಗುಜರಾತಿನ ರಾಜಕೋಟ್‌ನಲ್ಲಿ ನಡೆದ ಅಖಿಲ ಭಾರತ ಮಟ್ಟದ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದ್ದಾರೆ. ಸುಮಾರು 600 ವಿದ್ಯಾರ್ಥಿಗಳು ಪಾಲ್ಗೊಂಡಿದ್ದ ಈ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭವು ರಾಜ್‌ಕೋಟ್‌ನಲ್ಲಿ ನಡೆದು ಪ್ರತಿಭಾ ಪ್ರಮಾಣ ಪತ್ರ ಹಾಗೂ ರೂ 6000/– ನಗದು ಬಹುಮಾನವನ್ನು ಶ್ರೀ ರಾಮಕೃಷ್ಣ ಮಠದ ಸ್ವಾಮೀಜಿಗಳಿಂದ ಶ್ರೀ ರಂಜನ್ ಬಿ ಯು ಸ್ವೀಕರಿಸಿದರು. ಶ್ರೀ ರಂಜನ್‌ರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಕೋಟೆಕಾರು ಶೃಂಗೇರಿ ಮಠದಲ್ಲಿ ಜಗದ್ಗುರುಗಳ ವರ್ಧಂತ್ಯುತ್ಸವ

ಕೋಟೆಕಾರಿನ ಶೃಂಗೇರಿ ಮಠದಲ್ಲಿ ದಿನಾಂಕ 05-04-2014ರಂದು ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ 64ನೇ ವರ್ಧಂತ್ಯುತ್ಸವದ ಪ್ರಯುಕ್ತ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿತು.

ಅಂದು ಬೆಳಿಗ್ಗೆ ಮಹಾಗಣಪತಿ ಹೋಮ, ಆಯುಷ್ಯಹೋಮ, ಮಧ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ ನೆರವೇರಿತು.

ಮಾಜಿ ವಿಧಾನ ಪರಿಷತ್ ಸದಸ್ಯರಾದ ಕೆ. ಬಾಲಕೃಷ್ಣ ಭಟ್, ವೇದ ಬ್ರಹ್ಮಶ್ರೀ ಹಿರಣ್ಯ ವೆಂಕಟೇಶ ಭಟ್ ಬಾಯಾರು ಮೊದಲಾದ ಗಣ್ಯರ ಉಪಸ್ಥಿತಿಯಲ್ಲಿ ಶ್ರೀ ಕುಂಬ್ಳೆ ಸುಂದರ್‌ರಾವ್ ಮಂಗಳೂರು, ಪ್ರೊ। ವಿ.ಬಿ.ಅರ್ತಿಕಜೆ ಪುತ್ತೂರು, ಶ್ರೀ ದಾಮೋದರ ನಿಸರ್ಗ ಮಂಗಳೂರು, ಶ್ರೀ ವೈ.ಯಂ.ಶ್ರೀಧರ ರಾವ್ ಅದಮಾರು, ಶ್ರೀ ಪೊಳಲಿ ಜಗದೀಶ ದಾಸ ಮೊದಲಾದವರನ್ನು ವಿದ್ವತ್ ಸನ್ಮಾನ ಮಾಡಲಾಯಿತು.

ಸಂಜೆ ಹೆಸರಾಂತ ಕಲಾವಿದರಿಂದ ಕರ್ನಾಟಕ ಸಂಗೀತ ಕಛೇರಿ ಮತ್ತು ಯಕ್ಷಗಾನ ತಾಳಮದ್ದಳೆ ನೆರವೇರಿತು.

## ಕಾರ್ಕಳ ಶ್ರೀರಾಮನವಮಿ ಆಚರಣೆ

ಕಾರ್ಕಳ ಜೋಗುಳಬೆಟ್ಟು ಶ್ರೀ ರಾಮಧಾಮ ಧ್ಯಾನ ಮಂದಿರದಲ್ಲಿ ಶ್ರೀ ರಾಮನವಮಿ ಪ್ರಯುಕ್ತ ಗಣಹೋಮ, ನಾಗಾರಾಧನೆ, ಏಕಾದಶ ರುದ್ರಾಭಿಷೇಕ, ಸಹಸ್ರಾರ್ಚನೆಯೊಂದಿಗೆ ಧಾರ್ಮಿಕ ವಿಧಿಗಳು ನೆರವೇರತು. ಶ್ರೀಮತಿ ಸಾವಿತ್ರಿ ಮನೋಹರ್ ನೇತೃತ್ವದಲ್ಲಿ ಭಜನೆ, ರಾತ್ರಿ ಶ್ರೀ ದುರ್ಗಾನಮಸ್ಕಾರ ಪೂಜಾ ವಿಧಿಯೂ ನಡೆಯಿತು. ಮಧ್ಯಾಹ್ನ ಹಾಗೂ ರಾತ್ರಿ ನೆರೆದ ಭಕ್ತರೆಲ್ಲರಿಗೂ ಪ್ರಸಾದ ಭೋಜನದ ವ್ಯವಸ್ಥೆ ಮಾಡಲಾಗಿದ್ದು.

ವೈದಿಕರಾದ ಶ್ರೀ ದೇವರಾಜ ಹೆಬ್ಬಾರ್ ಪಾವಂಜೆ ಮತ್ತು ಶ್ರೀ ಕೃಷ್ಣರಾಜ ಭಟ್ ಹೆಜಮಾಡಿ ಇವರು ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು. ಪರಪ್ಪು ರತ್ನಾಕರ ರಾವ್‌ರವರು ಪಾರಾಯಣ ಪಠಣ ಮಾಡಿದರು. ಕುಟುಂಬದ ಹಿರಿಯರಾದ ಶ್ರೀ ಗೋಪಾಲಕೃಷ್ಣ ಕೋಲ್ಪೆ ದಂಪತಿಗಳ ನೇತೃತ್ವದಲ್ಲಿ ಧ್ಯಾನ ಮಂದಿರದ ಶ್ರೀ ಶಶಿಧರರಾವ್ ಹಾಗೂ ಶ್ರೀ ಚಂದ್ರಶೇಖರ ರಾವ್ ಅವರ ಸಹಕಾರದಿಂದ ಕಾರ್ಯಕ್ರಮ ಸಂಪನ್ನಗೊಂಡಿತು.

ವರದಿ : **ಜಿ.ಕೆ. ಕೋಲ್ಪೆ ಉಡುಪಿ**

## ಮಾಂಗಲ್ಯಂ ತಂತುನಾನೇನ ....

ಶ್ರೀ ಅರುಣ್‌ಕುಮಾರ್ ಮತ್ತು ಶ್ರೀಮತಿ ಆಶಾಲತಾರವರ ಪುತ್ರ **ಅರವಿಂದ** ಹಾಗೂ ಡಾ। ಪೂಜಾ ಮತ್ತು ಡಾ। ಪ್ರಹ್ಲಾದ್ ತಾಳಿಕೋಟೆ ಇವರ ಪುತ್ರಿ **ಮಾನಸಿ** ಇವರ ವಿವಾಹವು ದಿನಾಂಕ 20-03-2014ರಂದು ಬೆಂಗಳೂರಿನ ಬಂಟರ ಸಂಘದಲ್ಲಿ ನೆರವೇರಿತು.

★★★ ★★★

ಕರ್ವಾಲು ಶ್ರೀಮತಿ ಪಿ.ಪ್ರಸನ್ನ ಕುಮಾರಿ ಮತ್ತು ಶ್ರೀ ಅನಂತಪಟ್ಟಾಭಿಯವರ ಪುತ್ರ **ಅಶ್ವಿನ್ ಕುಮಾರ್** ಹಾಗೂ ಶ್ರೀಮತಿ ಶ್ಯಾಮಲಾ ಮತ್ತು ಶ್ರೀ ಇನ್ನಾ ಭಾಸ್ಕರ್‌ರಾವ್‌ರವರ ಪುತ್ರಿ **ಚೈತ್ರ** ಇವರ ವಿವಾಹವು ದಿನಾಂಕ 13-04-2014ರಂದು ಕಟಪಾಡಿಯ ಶ್ರೀ ವೆಂಕಟರಮಣ ದೇವಳದ ಎಂ.ಆರ್. ಕಾಮತ್ ಮೆಮೋರಿಯಲ್ ಹಾಲ್‌ನಲ್ಲಿ ನೆರವೇರಿತು.

## ಶುಭಜನನ

ಕೊಕ್ರಾಡಿ ಚೈತನ್ಯರಾವ್ (ಕೊಕ್ರಾಡಿ ಶ್ರೀ ಸುರೇಶ್ ರಾವ್ ಮತ್ತು ಶ್ರೀಮತಿ ನಾಗವಲ್ಲಿ ದಂಪತಿಗಳ ಪುತ್ರ) ಮತ್ತು ಶ್ರೀಮತಿ ರಮ್ಯಾರಾವ್ ದಂಪತಿಗಳಿಗೆ ದಿನಾಂಕ 15-03-2014ರಂದು ಗಂಡು ಶಿಶುವಿನ ಜನನ.

★★★ ★★★

ಸುಳ್ಯ ಅಜ್ಜಾವರದ ಕರಣೀಕ ಮನೆಯ ಶ್ರೀ ರಾಮಪ್ರಸಾದ್ ರಾವ್ ಮತ್ತು ಶ್ರೀಮತಿ ಅಂಬಿಕಾ ದಂಪತಿಗಳಿಗೆ ದಿನಾಂಕ 09-04-2014ರಂದು ಗಂಡು ಶಿಶುವಿನ ಜನನ.

## ಬ್ರಹ್ಮೋಪದೇಶ

**ಚಿ। ಅಕ್ಷಯ್**

ಮುಂಬೈಯಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ಶಿಲ್ಪಾ ಮತ್ತು ಶ್ರೀ ಅಶ್ವಿನಿಕುಮಾರ್ ರಾವ್ ಇವರ ಪುತ್ರ **ಅಕ್ಷಯ್**‌ನ ಬ್ರಹ್ಮೋಪದೇಶವು ದಿನಾಂಕ 19-03-2014ರಂದು ಪಾವಂಜೆಯ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಶ್ರೀ ಶಾರದ್ವತ ಯಜ್ಞಾಂಗಣದಲ್ಲಿ ನೆರವೇರಿತು.

**ಚಿ। ಭವಿತ್**

ಶ್ರೀ ಬಾಬುರಾಜ ಮತ್ತು ಶ್ರೀಮತಿ ದಿವ್ಯ ಇವರ ಪುತ್ರ **ಭವಿತ್**‌ನ ಬ್ರಹ್ಮೋಪದೇಶವು ದಿನಾಂಕ 09-04-2014ರಂದು ಪಡುಬಿದ್ರಿಯ ಸ್ವಗೃಹ 'ರಜತಾದ್ರಿ'ಯಲ್ಲಿ ನೆರವೇರಿತು.

**ಚಿ। ಕಿಶನ್‌ರಾಜ್**

ಬಂಟಕಲ್‌ನಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ಮಾಲತಿ ಮತ್ತು ಶ್ರೀ ರಾಜರಾವ್ ದಂಪತಿಗಳ ಪುತ್ರ **ಕಿಶನ್‌ರಾಜ್**‌ನ ಬ್ರಹ್ಮೋಪದೇಶವು ದಿನಾಂಕ 13-04-2014ರಂದು ಸ್ವಗೃಹ ಕಿಶನ್‌ನಿಲಯದಲ್ಲಿ ನೆರವೇರಿತು.

**ಚಿ। ಮನೋಜ್**

ಶ್ರೀಮತಿ ಮತ್ತು ಶ್ರೀ ಶ್ಯಾಮ್‌ಪ್ರಸಾದ್ ದಂಪತಿಗಳ ಪುತ್ರ **ಮನೋಜ್**‌ನ ಬ್ರಹ್ಮೋಪದೇಶವು ದಿನಾಂಕ 13-04-2014ರಂದು ನಂದಿಕೂರಿನ ಸ್ವಗೃಹ ಲಕ್ಷ್ಮೀ ನಿವಾಸದಲ್ಲಿ ನೆರವೇರಿತು.

## ಗೃಹ ಪ್ರವೇಶ

ಶ್ರೀಮತಿ ಮತ್ತು ಶ್ರೀ ವಿಶ್ವೇಶ್ವರರಾವ್ ಅವರು ಕಾರ್ಕಳ ತೆಳ್ಳಾರು ರಸ್ತೆಯಲ್ಲಿ ನಿರ್ಮಿಸಿದ 'ನಂದನ ರೆಸಿಡೆನ್ಸಿ' ಇದರ ಪ್ರವೇಶೋತ್ಸವವನ್ನು ದಿನಾಂಕ 24-03-2014ರಂದು ನೆರವೇರಿಸಿದರು.

★★★ ★★★

ಶ್ರೀಮತಿ ಸೀತಾಲಕ್ಷ್ಮಿ ಮತ್ತು ಮಕ್ಕಳು ನಂದಿಕೂರಿನ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಬಳಿ ನೂತನವಾಗಿ ನಿರ್ಮಿಸಿದ ಮನೆ 'ಲಕ್ಷ್ಮೀನಿವಾಸ' ಪ್ರವೇಶೋತ್ಸವವನ್ನು ದಿನಾಂಕ 13-04-2014ರಂದು ನೆರವೇರಿಸಿದರು.

## ವಿಳಾಸ ಬದಲಾವಣೆ

**ಜಯಪ್ರಕಾಶ ರಾವ್ ಯಂ.ಕೆ.**

ಸ್ವಸ್ತಿಕ್ ಪಾರ್ಕ್, ಮನೆ ನಂ.407, 4ನೇ ಮಹಡಿ, ಹಳೆ ಕೆ.ಇ.ಬಿ. ರಸ್ತೆ,
ಪಡುಬಿದ್ರಿ, ಉಡುಪಿ ತಾಲೂಕು.
ದೂರವಾಣಿ : 9663567653, 9945736397

## ಮೇಷ ಮಾಸದ ವಿಶೇಷ ದಿನಗಳು

| | |
|---|---|
| 14-04-2014 | ಮೇಷ ಸಂಕ್ರಮಣ, ಅಶ್ವಿನೀ ನಕ್ಷತ್ರಾರಂಭ |
| 15-04-2014 | ಸೌರ ಯುಗಾದಿ, ಪೂರ್ಣಿಮಾ |
| 18-04-2014 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ-9.45ಕ್ಕೆ |
| 25-04-2014 | ಸರ್ವೇಕಾದಶೀ |
| 26-04-2014 | ಪ್ರದೋಷಃ |
| 27-04-2014 | ಭರಣೀ ನಕ್ಷತ್ರಾರಂಭ |
| 29-04-2014 | ಅಮವಾಸ್ಯಾ |
| 02-05-2014 | ಅಕ್ಷಯ ತೃತೀಯಾ |
| 04-05-2014 | ಶ್ರೀ ಶಂಕರ ಜಯಂತೀ |
| 10-05-2014 | ಸರ್ವೈಕಾದಶೀ |
| 11-05-2014 | ಕೃತಿಕಾ ನಕ್ಷತ್ರಾರಂಭ |
| 12-05-2014 | ಪ್ರದೋಷಃ |
| 14-05-2014 | ವೃಷಭ ಸಂಕ್ರಮಣ, ಪೂರ್ಣಿಮಾ |

## MOTHER INDIA

By : **SAGAR.P**, X Std. Peruvaje

Standing high in her Position,
Centrally She takes Position !
There is she with all her Children,
Relaxing in this great heaven!

Happily she smiles at us,
Forgetting the post distress!
We, her children lives in peace,
The blood drops fuel for independence!

She has her own distinct feature,
She has the glorifying culture!
The golden word ñëHappiness for allí
Is in her crown a shimming pearl !

The Gods and saints of all religion,
Live in her with no confusion !
Felony finds no place in her,
Cowardice all away from her.

Thus we bow before her from heart,
We now pray to her in short !
Whatever may come in future !
Please be always our Tutor!

your light of Knowledge blows away,
The darkness if there any today!.

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.18-04-2014) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.20-04-2014 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.20-04-2014 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**


## ನಿಧನ

**ಎ. ಸರಸ್ವತಿಯಮ್ಮ**

ಅಜ್ಜಂಪುರ ದಿ। ಎ.ನಾಗಪ್ಪಯ್ಯನವರ ಧರ್ಮಪತ್ನಿ ಎ. ಸರಸ್ವತಿಯಮ್ಮನವರು (86ವರ್ಷ) ದಿನಾಂಕ 17-03-2014ರಂದು ಸ್ವಗೃಹದಲ್ಲಿ ನಿಧನರಾದರು. ಮೃತರು ಪುತ್ರ ಚಂದ್ರಶೇಖರ್ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

**ಕೂಡ್ಲು ಸದಾಶಿವ ಶಾನುಭಾಗ್**



ಕೂಡ್ಲು ಈಶ್ವರ ಶಾನುಭಾಗರ ಹಿರಿಯ ಪುತ್ರ ಕೂಡ್ಲು ಸದಾಶಿವ ಶಾನುಭಾಗ್ (68 ವರ್ಷ) ತಾ.17-03-2014ರಂದು ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

★★★ ★★★

**ಲಕ್ಷ್ಮೀ ಅಮ್ಮ**

ಹೈದರಾಬಾದ್‌ನಲ್ಲಿ ವಾಸ್ತವ್ಯದಲ್ಲಿದ್ದ ದಿ। ಹೇರಾಡಿ ನಾಗೇಶರಾಯರ ಧರ್ಮಪತ್ನಿ ಲಕ್ಷ್ಮೀ ಅಮ್ಮ (93 ವರ್ಷ) ಇವರು ದಿನಾಂಕ 06-04-2014ರಂದು ನಿಧನರಾದರು. ಮೃತರು ನಾಲ್ವರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

★★★ ★★★

**ಶಿವರಾವ್**

ಪೆರುವಾಜೆಯಲ್ಲಿ ವಾಸ್ತವ್ಯದಲ್ಲಿದ್ದ ಶಿವರಾವ್ (87 ವರ್ಷ) ಇವರು ದಿನಾಂಕ 08-04-2014ರಂದು ತಮ್ಮ ಸ್ವಗೃಹ "ರತ್ನ ನಿವಾಸ"ದಲ್ಲಿ ನಿಧನರಾದರು. ನಿವೃತ್ತ ಶಿಕ್ಷಕರೂ, ಉತ್ತಮ ಕೃಷಿಕರೂ ಆಗಿದ್ದ ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಮತ್ತು ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.

★★★ ★★★

**ವೈ.ಸುಲೋಚನಾ ದೇವಿ**

ಉಚ್ಚಿಲದಲ್ಲಿ ವಾಸ್ತವ್ಯದಲ್ಲಿದ್ದ ದಿ। ಎಲ್ಲೂರು ಸದಾಶಿವರಾಯರ ಪತ್ನಿ ವೈ. ಸುಲೋಚನಾ ದೇವಿ (75 ವರ್ಷ) ಅವರು ತಾ 07-04-2014ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಬ್ರಹ್ಮಾವರ ಎಸ್.ಎಮ್.ಎಸ್.ಕಾಲೇಜಿನ ಪ್ರಾಧ್ಯಾಪಕರಾದ ಡಾ। ರವೀಂದ್ರನಾಥ ರಾವ್ ಮತ್ತು ದಿಲ್ಲಿಯ ಕೇಂದ್ರ ಸಚಿವಾಲಯದ ಗ್ರಂಥಾಲಯ ಅಧಿಕಾರಿ ಡಾ। ವೈ.ಅವನೀಂದ್ರನಾಥ ರಾವ್ ಸೇರಿದಂತೆ ಮೂವರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

★★★ ★★★

**ಬಿ. ಮನೋರಮಾ ರಾವ್**

ಬೆಂಗಳೂರಿನಲ್ಲಿ ವಾಸ್ತವ್ಯದಲ್ಲಿದ್ದ ದಿ। ಶಂಕರರಾವ್‌ರವರ ಧರ್ಮಪತ್ನಿ ಬಿ. ಮನೋರಮಾ ರಾವ್ (70 ವರ್ಷ) ದಿನಾಂಕ 27-02-2014ರಂದು ಸ್ವಗೃಹದಲ್ಲಿ ನಿಧನರಾದರು. ಬೆಂಗಳೂರಿನ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಮೃತರು ಪುತ್ರ-ಖ್ಯಾತ ನ್ಯಾಯವಾದಿ ಶ್ರೀ ಶರತ್ ಸಹಿತ ಓರ್ವ ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

Krishna Rao
Ph : 2520652
Mob. : 9902029048
KISHAN


Studio & Video
Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

# ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ



**ಪ್ರಶ್ನೆ : ನಮ್ಮ ಆರೋಗ್ಯಕ್ಕೂ ಮತ್ತು ನಮ್ಮ ಉದ್ಯೋಗಕ್ಕೂ ಇರುವ ಸಂಬಂಧವೇನು?**

**ಡಾ। ವೈ. ಸುದರ್ಶನ ರಾವ್**

**ಉತ್ತರ :** ನಮ್ಮ ಆರೋಗ್ಯಕ್ಕೂ ಹಾಗೂ ನಮ್ಮ ಉದ್ಯೋಗಕ್ಕೂ ಹಾಗೂ ಅದರೊಂದಿಗೆ ನಮಗೆ ಬರಬಹುದಾದ ಖಾಯಿಲೆಗಳಿಗೂ ಪರಸ್ಪ ರ ಸಂಬಂಧವಿರುವುದು ಎಲ್ಲರ ಅನುಭವಕ್ಕೆ ಬಂದಿರುವ ವಿಷಯವಾಗಿದೆ. ಎಷ್ಟೋ ಬಾರಿ ನಮ್ಮ ಕೆಲಸವೇ ಹಾಗಿದೆ ಏನು ಮಾಡೋಣ ಎಂದು ಕೆಲವರು ತಮ್ಮ ಕಾಯಿಲೆಯ ಬಗ್ಗೆ ಉದ್ಗಾರ ತೆಗೆಯುವುದನ್ನು ಗಮನಿಸಿರಬಹುದು. ನಮ್ಮ ಉದ್ಯೋಗವು ನಮ್ಮ ದೇಹದ ಮೇಲೆ ಯಾವ ಯಾವ ರೀತಿ ಪರಿಣಾಮ ಬೀರುತ್ತದೆಂಬುದನ್ನು ಈ ಲೇಖನದಲ್ಲಿ ಪರಿಶೀಲಿಸೋಣ.

ನಾವು ಕೈಗೊಳ್ಳುವ ವೃತ್ತಿಯನ್ನು ಒಂದು ಕಡೆ ಕುಳಿತು ಕೆಲಸ ಮಾಡುವಂತಹದು (Sedentary) ಹಾಗೂ ಮೈಮುರಿದು ಕೆಲಸ ಮಾಡುವ ಶ್ರಮಿಕ ವರ್ಗದ್ದು (Manual Labour )ಎಂದು ಎರಡು ವಿಧವಾಗಿ ವಿಭಾಗಿಸಿಕೊಳ್ಳಬಹುದು. ಮೊದಲನೆಯ ವಿಭಾಗದಲ್ಲಿ ವೈದ್ಯರು, ಇಂಜಿನಿಯರರು, ಅಧ್ಯಾಪಕರು, ಡ್ರೈವರ್‌ಗಳು, ಹೋಟೆಲು ಕೆಲಸಗಾರರು, ಸೇಲ್ಸ್‌ಮ್ಯಾನ್‌ಗಳು, ದಲ್ಲಾಳಿಗಳು, ಬ್ಯಾಂಕ್ ಹಾಗೂ ಇತರ ಆಫೀಸು ಕೆಲಸದ ಉದ್ಯೋಗಿಗಳು ಬರುತ್ತಾರೆ. ಎರಡನೆಯ ವಿಭಾಗದಲ್ಲಿ ಕೃಷಿಕರು, ಕೂಲಿ ಕೆಲಸದವರು, ಮೆಕ್ಯಾನಿಕ್‌ಗಳು, ಬಡಗಿಗಳು, ಕಮ್ಮಾರರು ಇತ್ಯಾದಿಗಳು ಬರುತ್ತಾರೆ. ಯಾವುದೇ ಉದ್ಯೋಗದಿಂದಾಗಿ ಬರುವ ಖಾಯಿಲೆಯು ಒಂದೋ ನೇರವಾಗಿ ಆ ಉದ್ಯೋಗದಿಂದಲೇ ಇರಬಹುದು ಅಥವಾ ನೇರವಾಗಿ ಸಂಬಂಧಿಸಿರದೆ ಆ ಉದ್ಯೋಗದೊಂದಿಗೆ ಬೆಸೆದುಕೊಂಡಿರುವ ಇತರ ಕಾರಣಗಳಿಂದ ಬರುತ್ತಿರಬಹುದು. ಖಾಯಿಲೆಗೂ ಉದ್ಯೋಗಕ್ಕೂ ನೇರ ಸಂಬಂಧವಿದ್ದರೆ ಉದ್ಯೋಗ ಬದಲಾಯಿಸದೇ ಕಾಯಿಲೆ ಗುಣಮಾಡುವುದಾಗಲಿ ಅಥವಾ ಮರುಕಳಿಸುವುದನ್ನು ತಪ್ಪಿಸುವುದಾಗಲೀ ಮಾಡುವುದು ಕಷ್ಟ. ಉದ್ಯೋಗದೊಂದಿಗೆ ಬೆಸೆದುಕೊಂಡಿರುವ ಇತರ ಕಾರಣದಿಂದಾಗಿದ್ದರೆ ಈ ಪೂರಕ ಕಾರಣವನ್ನು ಪ್ರತ್ಯೇಕಿಸುವ ಮೂಲಕ ಗುಣಪಡಿಸಬಹುದು ಹಾಗೂ ಮರುಕಳಿಸುವುದನ್ನು ತಡೆಗಟ್ಟಬಹುದು.

ನೇರವಾಗಿ ಉದ್ಯೋಗದಿಂದಲೆ ಬರುವ ಖಾಯಿಲೆಗಳ ಸಂಖ್ಯೆ ಕಡಿಮೆ ಇದೆ. ಇದಕ್ಕೆ ಉದಾಹರಣೆಗಳೆಂದರೆ ನಿಂತುಕೊಂಡು ಕೆಲಸ ಮಾಡುವವರಿಗೆ ಬರುವ ವೆರಿಕೋಸ್‌ವೇಯ್ನ್ ಖಾಯಿಲೆ, ಗಣಿಕಾರ್ಮಿಕರಲ್ಲಿ ಬರುವ ಆಸ್ಬೆಸ್ಟೋಸಿಸ್ ಎಂಬ ಖಾಯಿಲೆ, ವಿಕಿರಣ ಹಾಗೂ ರಾಸಾಯನಿಕಗಳಿಂದ ಬರುವ ಕ್ಯಾನ್ಸರ್ ಖಾಯಿಲೆಗಳು ಇದಕ್ಕೆ ಉದಾಹರಣೆಗಳು. ಈ ತರಹದ ಖಾಯಿಲೆಗಳಿಗೆ ತೊಂದರೆಗೊಳಗಾದವನು ರಜೆ ಹಾಗೂ ಪರಿಹಾರ ಪಡೆಯುವ ಹಕ್ಕನ್ನು ಕಾನೂನು ನೀಡಿದೆ. ಆದರೆ ಹೆಚ್ಚಿನ ಖಾಯಿಲೆಗಳು ಉದ್ಯೋಗದೊಂದಿಗೆ ಬೆಸೆದುಕೊಂಡಿರುವ ಪೂರಕ ಕಾರಣಗಳಿಂದ ಬರುವಂತಹವು.

ನಮ್ಮ ಉದ್ಯೋಗದಿಂದ ಬರುವ ಖಾಯಿಲೆಗಳನ್ನು ಅದು ಯಾವ ರೀತಿ ಬರುತ್ತದೆಂದು ವಿಶ್ಲೇಶಿಸಿ ಅರ್ಥ ಮಾಡಿಕೊಳ್ಳಬಹುದು. ಮೊತ್ತ ಮೊದಲನೆಯನೆಯದಾಗಿ ನಾವು ಸೇವಿಸುವ ಆಹಾರದ ಕ್ರಮದಲ್ಲಿ ಬರುವಂತಾದ್ದು. ಕುಳಿತು ಕೆಲಸ ಮಾಡುವವರಲ್ಲಿ ದೇಹಕ್ಕೆ ಒಂದು ದಿನಕ್ಕೆ ಬೇಕಾಗುವ ಕ್ಯಾಲೋರಿಯು ಸುಮಾರು 1800ರಿಂದ 2000 ತನಕ ಮಾತ್ರ ಇರುತ್ತದೆ. ಆದರೆ ಅವರು ಸೇವಿಸುವ ಕ್ಯಾಲೋರಿಯು ಅಗತ್ಯಕ್ಕಿಂತ ಹೆಚ್ಚಾಗುವುದೇ ಈ ವರ್ಗದವರಿಗೆ ಕಾಡುವ ಸಮಸ್ಯೆ. ಹಾಗಾಗಿ ಇವರಲ್ಲಿ ಬೊಜ್ಜುತನ, ಡಯಾಬಿಟಿಸ್, ಅಧಿಕ ರಕ್ತದೊತ್ತಡ, ಅಧಿಕ ಕೊಲೆಸ್ಟಿರಾಲ್ ಬರುವ ಸಾಧ್ಯತೆ ಹೆಚ್ಚು ಇದೆ. ಈ ಮೇಲೆ ಹೇಳಿದ ಖಾಯಿಲೆಗಳಿಗೆ ಅನುವಂಶೀಯತೆಯ ವಾಸನೆಯೂ ಇರುವುದರಿಂದ ಈ ಎರಡು ಕಾರಣಗಳು ಜೊತೆಯಾಗಿ ಬಿಟ್ಟಲ್ಲಿ ಈ ಖಾಯಿಲೆಗಳಿಗೆ ಸಣ್ಣ ಪ್ರಾಯದಲ್ಲೇ ಬಲಿಯಾಗುವ ಸಾಧ್ಯತೆ ಹೆಚ್ಚಿದೆ. ಹಾಗಾಗಿ ಈ ವರ್ಗಕ್ಕೆ ಸೇರಿದವರು ತಾವು ಸೇವಿಸುವ ಕ್ಯಾಲೋರಿಗಳ ಬಗ್ಗೆ ಗಮನವಿಡಬೇಕು ಹಾಗೂ ಪ್ರತಿ ದಿನ ಕನಿಷ್ಟ ಒಂದು ಗಂಟೆ ವ್ಯಾಯಾಮ ಮಾಡುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಶ್ರಮಿಕ ವರ್ಗದಲ್ಲಿ ಇದಕ್ಕೆ ವಿರುದ್ದವಾದ ಪರಿಸ್ಥಿತಿ ಇದೆ. ಅವರಲ್ಲಿ ಅಪೌಷ್ಟಿಕ ಆಹಾರದ ಸೇವನೆಯಿಂದಾಗುವ ಕಾಯಿಲೆಗಳಾದ ಕೃಶದೇಹ(malnutrition) ಹಾಗೂ ವಿಟಮಿನ್‌ಗಳ ಕೊರತೆ ಹೆಚ್ಚು.

ಕುಡಿಯುವ ನೀರು ಸೇವಿಸುವ ಆಹಾರದಷ್ಟೇ ಪ್ರಾಮುಖ್ಯವಾದುದಲ್ಲವೇ? ಮೊದಲನೆಯ ವರ್ಗಕ್ಕೆ ಸೇರಿದವರಿಗೆ ಉತ್ತಮ ಗುಣಮಟ್ಟದ ಕುಡಿಯುವ ನೀರಿನ ಸೌಕರ್ಯ ಸಾಮಾನ್ಯವಾಗಿ ಲಭ್ಯವಿರುತ್ತದೆ ಹಾಗೂ ಅವರಿಗೆ ಇದರ ಪ್ರಾಮುಖ್ಯತೆಯ ಬಗ್ಗೆ ಜಾಗೃತಿಯೂ ಇರುತ್ತದೆ ಆದರೆ ಶ್ರಮಿಕ ವರ್ಗವು ಎಲ್ಲೆಲ್ಲಿ ಕೆಲಸ ಮಾಡುವುದರಿಂದ ಕೆಲಸದ ಜಾಗದಲ್ಲಿ ಲಭ್ಯವಿರುವ ನೀರನ್ನೇ ಬಳಸಬೇಕಾಗುತ್ತದೆ. ಹಾಗಾಗಿ ಇವರಲ್ಲಿ ಕಲುಷಿತ ನೀರನ್ನು ಕುಡಿಯುವುದರಿಂದ ಬರುವ ಖಾಯಿಲೆಗಳು ಸಾಮಾನ್ಯ.

ಹಾಗೆಯೇ ಕಲುಷಿತ ಗಾಳಿಯನ್ನು ಸೇವಿಸಿ ಬರುವ ಕಾಯಿಲೆಗಳಾದ ಟ್ಯುಬರ್ಕ್ಯುಲೋಸಿಸ್, ಸಿಲಿಕೋಸಿಸ್, ಆಸ್ಬೆಸ್ಟೋಸಿಸ್, ಉಬ್ಬಸ, ಬ್ರಾಂಕೈಟಿಸ್ ಖಾಯಿಲೆಗಳು ಧೂಳಿನಲ್ಲಿ , ಗಣಿಗಳಲ್ಲಿ ಹಾಗೂ ಒಲೆಯ ಎದುರಿನಲ್ಲಿ ಕೆಲಸ ಮಾಡುವ ಶ್ರಮಿಕ ವರ್ಗದಲ್ಲಿ ಜಾಸ್ತಿ. ಆಸ್ಬೆಸ್ಟೋಸಿಸ್ ಎಂಬುದು ಗಣಿಯ ಧೂಳಿನಲ್ಲಿರುವ ಒಂದು ಧಾತು. ಇದು ಉಸಿರಾಡುವ ಗಾಳಿಯ ಮೂಲಕ ಶ್ವಾಸಕೋಶವನ್ನು ಪ್ರವೇಶಿಸಿ ಶ್ವಾಸಕೋಶದ ಗಾಳಿಯಲ್ಲಿರುವ ಆಮ್ಲಜನಕವನ್ನು ಹೀರಿಕೊಳ್ಳುವ ಸಾಮರ್ಥ್ಯವನ್ನು ಹಾಳುಗೆಡವುತ್ತದೆ. ಇದರ ಸೇವನೆಯು ನಿಧಾನವಾಗಿ ಶ್ವಾಸಕೋಶದ ಕ್ಯಾನ್ಸರ್‌ಗೂ ಎಡೆ ಮಾಡಿಕೊಡುತ್ತದೆ.

ಕೆಲಸ ಮಾಡುವಾಗ ನಮ್ಮ ದೇಹವು ಯಾವ ಭಂಗಿಯಲ್ಲಿರುತ್ತದೆ ಎಂಬುದು ಆರೋಗ್ಯ ಹಾಳುಮಾಡುವ ಇನ್ನೊಂದು ಮುಖ್ಯ ಅಂಶ. ಸದಾ ಕಾಲ ನಿಂತುಕೊಂಡು ಇರುವವರಿಗೆ ಕಾಲುಗಳಲ್ಲಿ ವೆರಿಕೋಸ್ ವೇಯ್ನ್ ಎಂಬ ಕಾಯಿಲೆ ಬರುತ್ತದೆ. ಈ ಖಾಯಿಲೆಯಲ್ಲಿ ಕಾಲಿನ ಅಶುದ್ದ ರಕ್ತವು ಕಾಲಿನಿಂದ ಹೃದಯದ ಕಡೆಗೆ ಹರಿಯಬೇಕಾದದ್ದು ಗುರುತ್ವಾಕರ್ಷಣೆಯ ಪರಿಣಾಮದಿಂದ ಹಿಮ್ಮುಖವಾಗಿ ಚಲಿಸುತ್ತದೆ. ಅಂದರೆ ಇವರಲ್ಲಿ ಕಾಲಿನ ರಕ್ತನಾಳಗಳಲ್ಲಿ ಈ ಗುರುತ್ವಾಕರ್ಷಣೆಯ ಪರಿಣಾಮವನ್ನು ಮೀಟಿ ರಕ್ತವನ್ನು ಕಾಲಿನಿಂದ ಮೇಲೆ ಹೃದಯದ ಕಡೆಗೆ ಒಯ್ಯುವ ವ್ಯವಸ್ಥೆಯು ಕೆಟ್ಟಿರುತ್ತದೆ. ಹಾಗಾಗಿ ಕಾಲಿನಲ್ಲಿ ಅಶುದ್ದ ರಕ್ತವೇ ಶೇಕರಣೆಯಾಗುತ್ತದೆ. ಸುಮಾರು ವರ್ಷಗಳು ಹೀಗೆ ಕಳೆದ ಹಾಗೆ ಇದರಿಂದಾಗಿ ಕಾಲಿನ ಅಶುದ್ದ ರಕ್ತನಾಳಗಳು ರಕ್ತತುಂಬಿ ಉಬ್ಬಿಕೊಳ್ಳುತ್ತವೆ. ಹಾಗೆಯೇ ಪಾದದ ಸುತ್ತಲಿನ ಚರ್ಮದ ಬಣ್ಣ ಗಾಢವಾಗುವುದು, ಅದೇ ಜಾಗದಲ್ಲಿ ತುರಿಸುವುದು, ತುರಿಸಿ ಗಾಯವಾಗುವುದು ಹಾಗೂ ಈ ಗಾಯ ಮಾಯದೇ ಇರುವುದು ಇತ್ಯಾದಿ ಚಿಹ್ನೆಗಳು ಈ ಖಾಯಿಲೆಯಲ್ಲಿ ಇರುತ್ತವೆ. ಈ ಕಾಯಿಲೆಯನ್ನು ತಡೆಗಟ್ಟಬೇಕಾದರೆ ಯಾವಾಗಲೂ ನಿಂತುಕೊಂಡು ಕೆಲಸ ಮಾಡುವರು ವಿಶೇಷವಾಗಿ ತಯಾರಿಸಿರುವ ಕಾಲುಗವಸುಗಳನ್ನು ಕೆಲಸದ ಸಮಯದಲ್ಲಿ ಹಾಕಿಕೊಳ್ಳಬೇಕು.

ಕೆಲಸದ ಸಮಯದಲ್ಲಿ ದೇಹವಿರುವ ಭಂಗಿಯಿಂದ ಉದ್ಭವಿಸುವ ಇನ್ನೊಂದು ಸಮಸ್ಯೆ ಬೆನ್ನುಕೋಲಿನದ್ದು. ಕುತ್ತಿಗೆ ಬಗ್ಗಿಸಿ ಸದಾಕಾಲ ಬರೆಯುವುದಾಗಲಿ. ಕಂಪ್ಯೂಟರ ಹಾಗೂ ಮೊಬೈಲ್ ಬಳಕೆಯಿಂದಾಗಲಿ ಕುತ್ತಿಗೆಯ ಎಲುಬುಗಳು ಒಂದೇ ಕಡೆ ಸವೆಯುತ್ತವೆ. ಈ ರೀತಿ ಸವೆಯುವುದರಿಂದ ಬೆನ್ನುಕೋಲಿನ ಎಲುಬುಗಳಲ್ಲಿರುವ ಸಣ್ಣ ತೂತುಗಳ ಮೂಲಕ ಹೊರಬರುವ ನರಗಳ ಮೇಲೆ ಚುಚ್ಚಿದ ಹಾಗಾಗಬಹುದು ಅಥವಾ ಒತ್ತಡ ಬೀಳಬಹುದು. ಆಗ ಕುತ್ತಿಗೆ ನೋವು, ಕೈಗಳಲ್ಲಿ ಸೆಳೆತ, ಬೆರಳುಗಳ ಹಿಡಿತದ ಬಿಗಿ ಸಡಿಲವಾಗಿರುವುದು ಇತ್ಯಾದಿ ತೊಂದರೆಗಳಿರುತ್ತವೆ.

ಯಾವುದೇ ಒಂದು ಅಂಗವನ್ನು ವಿಶ್ರಾಂತಿ ನೀಡದೇ ವಿಪರೀತವಾಗಿ ಬಳಸುವುದರಿಂದಲೂ ಕೆಲವು ಖಾಯಿಲೆಗಳು ಬರುತ್ತವೆ. ಹೀಗೆ ವಿಪರೀತ ಬಳಕೆಯಾಗುವ ಅಂಗವೆಂದರೆ ಕಣ್ಣು. ಉದಾಹರಣೆಗೆ ಕಣ್ಣಿನ ತೊಂದರೆಗಳು ಹೆಚ್ಚಾಗಿ ಕಂಪ್ಯೂಟರನ್ನು ಸತತವಾಗಿ ಬಳಸುವವರಲ್ಲಿ ಕಾಣಿಸುತ್ತದೆ. ಇವರು ರೆಪ್ಪೆ ಪಿಳುಕಿಸದೆ ಸತತವಾಗಿ ಪ್ರಖರ ಬೆಳಕಿನ ಕಂಪ್ಯೂಟರನ್ನು ದಿಟ್ಟಿಸುವುದರಿಂದ ಕಣ್ಣಿನಲ್ಲಿ ತೇವಾಂಶ ಕಡಿಮೆಯಾಗಿ ಕಣ್ಣುರಿ, ಕಣ್ಣು ಕೆಂಪಾಗುವುದು, ತುರಿಸುವುದು ಹಾಗೂ ಕಣ್ಣಿನ ಇನ್‌ಫೆಕ್ಷನ್ ಇವರಿಗೆ ಪದೇ ಪದೇ ಕಾಡುತ್ತದೆ. ತಲೆನೋವು ಹಾಗೂ ದೃಷ್ಟಿದೋಷಗಳೂ ಇವರಲ್ಲಿ ಸಾಮಾನ್ಯ. ಅತೀ ಬಳಕೆಯ ಎರಡನೆಯ ಅಂಗವೆಂದರೆ ಧ್ವನಿಪೆಟ್ಟಿಗೆ. ಧ್ವನಿಪೆಟ್ಟಿಗೆಯ ವಿಪರೀತ ಬಳಕೆಯಿಂದ ಅಧ್ಯಾಪಕರು ಹಾಗೂ ಸಂಗೀತಗಾರರಲ್ಲಿ ಧ್ವನಿಪೆಟ್ಟಿಗೆಯಲ್ಲಿ ದುರ್ಮಾಂಸ ಬೆಳೆಯುವುದು ಸಾಮಾನ್ಯ. ಮೂರನೆಯದಾಗಿ ದೇಹದ ಕೀಲುಗಳ ಸವೆತವು (ಆಯಾ ಕೆಲಸದಲ್ಲಿ ಬಳಕೆಯಾಗುವ ಕೀಲನ್ನು ಹೊಂದಿಕೊಂಡು) ಕೆಲವು ಉದ್ಯೋಗಗಳಲ್ಲಿ ಕಾಣುವ ಖಾಯಿಲೆ.

ನಮ್ಮ ಕೆಲಸದ ಪರಿಸರದಲ್ಲಿ ಹಲವಾರು ಜೈವಿಕ ಹಾಗೂ ರಾಸಾಯನಿಕ ಪದಾರ್ಥಗಳೊಂದಿಗೆ ಬರುವ ಸಂಪರ್ಕದಿಂದ ಅನೇಕ ಖಾಯಿಲೆಗಳು ಬರಬಹುದು. ಕೃಷಿಕರಿಗೆ ಹಾವು ಚೇಳು ಮುಳ್ಳು ಚುಚ್ಚುವುದು, ಟೆಟನಸ ಖಾಯಿಲೆ, ಇಲಿಜ್ವರ (ಇಲಿಯ ಮೂತ್ರದಿಂದ ಕಲುಷಿತವಾದ ಮಣ್ಣಿನ ಸಂಪರ್ಕದಿಂದ). ಪೈಂಟರ್‌ಗಳಲ್ಲಿ ಮೂತ್ರಕೋಶದ ಕ್ಯಾನ್ಸರ್, ಅನೇಕ ರಾಸಾಯನಿಕಗಳಿಂದ ಚರ್ಮರೋಗ ಹಾಗೂ ಚರ್ಮದ ಕ್ಯಾನ್ಸರ್, ಕಲ್ಲುಗಣಿ ಕಾರ್ಮಿಕರಲ್ಲಿ ಸಿಲಿಕೋಸಿಸ್ ಹಾಗೂ ಆಸ್ಬೆಸ್ಟೋಸಿಸ್ ಎಂಬ ಶ್ವಾಸಕೋಶದ ಕಾಯಿಲೆ. ವೈದ್ಯಕೀಯ ಸಿಬಂದಿಗಳಿಗೆ ತಮಗೆ ಸಂಪರ್ಕಕ್ಕೆ ಬಂದ ರೋಗಿಗಳ ಕಾಯಿಲೆ ಹರಡುವ ಸಾಧ್ಯತೆ. ಪ್ರಾಣಿಗಳೊಂದಿಗೆ ಕೆಲಸ ಮಾಡುವವರಿಗೆ ಬರಬಹುದಾದ ಆಂತ್ರಾಕ್ಸ್ ಖಾಯಿಲೆ ಹಾಗೂ ಬ್ರುಸೆಲ್ಲೋಸಿಸ್ ಎಂಬ ಜ್ವರ ಈ ತರಹದ ಖಾಯಿಲೆಗಳಿಗೆ ಉದಾಹರಣೆಗಳು.

ಕೆಲಸ ಮಾಡುವ ವಾತಾವರಣದಲ್ಲಿರಬಹುದಾದ ಕೆಲವು ವಿಕಿರಣಗಳಿಂದಲೂ ಖಾಯಿಲೆಗಳು ಬರುತ್ತವೆ. ಈ ವಿಕಿರಣಗಳು ನಮ್ಮ ಜೀನಗಳಲ್ಲಿ ಬದಲಾವಣೆ ತರುವ ಮೂಲಕ ಕ್ಯಾನ್ಸರ್‌ನಂತಹಾ ಖಾಯಿಲೆಗಳಿಗೆ ದಾರಿಮಾಡಿಕೊಡುವುದು ಖಚಿತವಾಗಿರುವ ಸಂಗತಿ. ಈ ವಿಕಿರಣಗಳು ಜೀನ್‌ನಲ್ಲಿ ದೋಷಪೂರಿತವಾದ ಬದಲಾವಣೆಗಳನ್ನು ಮಾಡಿ ವಿಚಿತ್ರವಾದ ಅನುವಂಶಿಕ ಖಾಯಿಲೆಗಳನ್ನು ತರಬಲ್ಲವು. ಈ ವಿಕಿರಣಗಳ ಬಗ್ಗೆ ಆಸ್ಪತ್ರೆಗಳಲ್ಲಿ ರೇಡಿಯಾಲಜಿ(X-Ray) ವಿಭಾಗದಲ್ಲಿ ಕೆಲಸಮಾಡುವವರು ಜಾಗರೂಕರಾಗಿರಬೇಕು. ಅಲ್ಲದೆ ವಿಕಿರಣ ಸೂಸುವ ವಸ್ತುಗಳ ಸಂಶೋಧನಾಲಯದಲ್ಲಿ ಕೆಲಸಮಾಡುವವರು, ನ್ಯೂಕ್ಲಿಯಾರ್ ರಿಯಾಕ್ಟರ್‌ಗಳಲ್ಲಿ ಕೆಲಸ ಮಾಡುವವರು ಹಾಗೂ ಇಂತಹಾ ಕೇಂದ್ರಗಳಿಂದ ಬರುವ ತ್ಯಾಜ್ಯಗಳ ಸಂಪರ್ಕಕ್ಕೆ ಬರುವವರೂ ಈ ಬಗ್ಗೆ ಜಾಗರೂಕರಾಗಿರಬೇಕು. ಎತ್ತರ ಪ್ರದೇಶಗಳಲ್ಲಿ ಹಾಗೂ ಬಾಹ್ಯಾಕಾಶದಲ್ಲಿನ (Space) ಸೂರ್ಯನ ಕಿರಣಗಳಲ್ಲೂ ಈ ವಿಕಿರಣಗಳ ಪ್ರಭಾವವಿರುತ್ತದೆ.

ಅತಿಯಾದ ಬೆಳಕು ಹಾಗೂ ಮಂದ ಬೆಳಕಿನಲ್ಲಿ ಕೆಲಸ ಮಾಡುವವರಿಗೆ ದೃಷ್ಟಿದೋಶ, ಅತಿಯಾದ ಶಬ್ದದಿಂದ ಶ್ರವಣದೋಶ ಹಾಗೂ ತಲೆಸುತ್ತು ಬಂದಂತಾಗುವ ತೊಂದರೆಗಳು ಕಾಣಿಸಬಹುದು. ಅತಿಯಾದ ಬಿಸಿಲಲ್ಲಿ ಕೆಲಸ ಮಾಡುವುದರಿಂದ ದೇಹದಲ್ಲಿ ನೀರಿನಂಶದ ಕೊರತೆಯಾಗುತ್ತದೆ. ಯಾವಾಗಲು ಸುಸ್ತು ಹಾಗೂ ತಲೆನೋವು ಇವರ ಸಮಸ್ಯೆ. ಅತಿಯಾದ ಬಿಸಿಲಿನಿಂದ ಪ್ರಾಣಕ್ಕೂ ಅಪಾಯವಾಗಬಹುದು . ಹಾಗೆಯೇ ಅತಿಯಾದ ಚಳಿಯಿಂದ ರಕ್ತಸಂಚಾರಕ್ಕೆ ತೊಂದರೆಯಾಗಿ ಗ್ಯಾಂಗ್ರೀನ್ (ಕೈಕಾಲುಗಳ ಬೆರಳು ಕೊಳೆತುಹೋಗುವುದು) ಆಗಬಹುದು.

ಕೆಲಸದ ಸಂದರ್ಭದಲ್ಲಿ ಅಫಘಾತ ಕೆಲವು ಉದ್ಯೋಗದಲ್ಲಿ ಸಾಮಾನ್ಯ. ಉದಾಹರಣೆಗೆ ದೊಡ್ಡ ಕುಲುಮೆಗಳ ಮುಂದೆ ಕೆಲಸಮಾಡುವಾಗ ಸುಟ್ಟಗಾಯಗಳಾಗುವುದು, ಯಂತ್ರಗಳ ಒಳಗೆ ದೇಹದ ಭಾಗಗಳು ಸಿಕ್ಕಿಬಿದ್ದು ಗಾಯವಾಗುವುದು, ಎತ್ತರದಿಂದ ಬೀಳುವುದು, ನೀರಿನಲ್ಲಿ ಮುಳುಗುವುದು, ಗಣಿಗಳಲ್ಲಿ ಉಸಿರುಕಟ್ಟಿ ಸಾಯುವುದು ಕೆಲವೊಂದು ಉದ್ಯೋಗಗಳಿಗೆ ಮೀಸಲಾದ ಅಪಘಾತಗಳು. ಇಂತಹ ಅಪಾಯಕಾರಿ ಉದ್ಯೋಗದಲ್ಲಿ ತೊಡಗುವ ಮುನ್ನ ಕಡ್ಡಾಯವಾಗಿ ಸಾಕಷ್ಟು ತರಬೇತಿ ಪಡೆದಿರಬೇಕು. ಕೆಲಸ ತಿಳಿಯದವರು ಚೋದ್ಯಕ್ಕಾದರೂ ಈ ಕೆಲಸವನ್ನು ಪ್ರಯತ್ನಿಸಬಾರದು. ಈ ಕೆಲಸಗಳಲ್ಲಿ ತೊಡಗುವ ಮುನ್ನ ಇರುವ ಕೆಲವು ರಕ್ಷಣಾ ಸೂಚನೆಗಳನ್ನು (ಉದಾ:ಹೆಲ್ಮೆಟ್ ಧರಿಸುವುದು, ಎತ್ತರದಲ್ಲಿ ಕೆಲಸ ಮಾಡುವವರು ರಕ್ಷಣಾ ಬೆಲ್ಟು ಧರಿಸುವುದು, ಬೆಂಕಿಯ ಹತ್ತಿರ ಕೆಲಸ ಮಾಡುವವರು ಕಣ್ಣಿಗೆ ಕನ್ನಡಕ ಹಾಕಿಕೊಳ್ಳುವುದು ಇತ್ಯಾದಿ.) ಕಡ್ಡಾಯವಾಗಿ ಪಾಲಿಸಬೇಕು. ಕೆಲಸದ ಸಮಯದಲ್ಲಿ ಅಮಲು ಪದಾರ್ಥ ಸೇವಿಸಬಾರದು.

ಕೆಲಸದೊಂದಿಗಿರುವ ಮಾನಸಿಕ ಒತ್ತಡ ವಿವಿಧ ರೀತಿಯ ಮಾನಸಿಕ ಖಾಯಿಲೆಗಳಿಗೆ ದಾರಿಮಾಡಿಕೊಡುತ್ತದೆ. ಕೆಲಸದ ಒತ್ತಡವು ಶ್ರಮಿಕ ವರ್ಗಕ್ಕೆ ಕಡಿಮೆ ಹಾಗೂ ಸಾಮಾಜಿಕವಾಗಿ ಮೇಲ್‌ಸ್ತರದಲ್ಲಿರುವವರಿಗೆ ಜಾಸ್ತಿ ಇರುತ್ತದೆ. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವವರಿಗೆ ಆಹಾರ ಹಾಗೂ ನಿದ್ರೆಯಲ್ಲಿ ಏರುಪೇರುಗಳಾಗಿ ಅನೇಕ ದೈಹಿಕ ಹಾಗೂ ಮಾನಸಿಕ ಸಮಸ್ಯೆಗಳು ಉದ್ಭವವಾಗುತ್ತದೆ. ಶಿಸ್ತುಬದ್ಧವಾದ ಜೀವನ ಹಾಗೂ ಧ್ಯಾನ ಈ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲುದು.

ಕೆಲಸದ ವಾತಾವರಣದಲ್ಲಿ ನಮಗೆ ಜೊತೆಯಾಗುವ ಗೆಳೆಯರು ಹಾಗೂ ನಾವು ಬೆಳೆಸಿಕೊಳ್ಳುವ ಹವ್ಯಾಸ (ಒಳ್ಳೆಯದು ಹಾಗೂ ಕೆಟ್ಟದು)ಗಳು ಕೂಡಾ ಒಂದೊಂದು ಕೆಲಸಕ್ಕೆ ಒಂದೊಂದು ಬಗೆಯಲ್ಲಿ ಇರುತ್ತದೆಂದರೆ ವಿಚಿತ್ರವೆನಿಸುತ್ತದೆಯೆ? ಉದ್ಯೋಗದ ದೆಸೆಯಿಂದ ಸದಾ ಸಂಚಾರದಲ್ಲಿರುವವರು, ಕುಟುಂಬದಿಂದ ದೂರವಿದ್ದು ಕೆಲಸಮಾಡುವವರು, ಒಂದೇ ಕೋಣೆಯಲ್ಲಿ ಗುಂಪಾಗಿ ವಾಸವಿರುವವರು ಸಹವಾಸ ದೋಷದಿಂದಾಗಿ, ಮದ್ಯಪಾನ ಧೂಮಪಾನ ಹಾಗೂ ನಶೆಪದಾರ್ಥಗಳ ಚಟಕ್ಕೂ, ಇತರ ದುರಭ್ಯಾಸಗಳಿಗೂ, ಗುಹ್ಯರೋಗಗಳಿಗೂ ಬಲಿಯಾಗುವುದು ಜಾಸ್ತಿ. ಸಾಂಕ್ರಮಿಕ ರೋಗಗಳೂ ಇಂತಹಾ ಉದ್ಯೋಗಗಳವರಿಗೆ ಬೇಗನೇ ಹರಡುತ್ತದೆ.

ಹೀಗೆ ನೂರಾರು ಖಾಯಿಲೆಗಳ ಚರಿತ್ರೆಯು ನಮ್ಮ ಉದ್ಯೋಗದೊಂದಿಗೆ ತಳುಕು ಹಾಕಿರುವುದನ್ನು ಕಾಣಬಹುದು. ಆದರೂ ನಮ್ಮ ಉದ್ಯೋಗದಿಂದ ನಮ್ಮ ಆರೋಗ್ಯ ಹಾಳಾಗುವುದನ್ನು ತಪ್ಪಿಸಲು ಕೆಲವು ಉಪಾಯಗಳಿವೆ.

ತಾನು ಈ ಕೆಲಸಕ್ಕೆ ಶಕ್ತನೇ ಎಂಬ ಬಗ್ಗೆ ಪೂರ್ವಭಾವಿ ಸ್ವಯಂ ವಿಶ್ಲೇಷಣೆ ಮತ್ತು ತಜ್ಞರಿಂದ ಸಲಹೆ ಹಾಗೂ ತಪಾಸಣೆ ಮೊದಲನೆಯದು. ತನ್ನ ಕೆಲಸದಿಂದ ತನ್ನ ಆರೋಗ್ಯಕ್ಕೆ ಯಾವ ರೀತಿ ಧಕ್ಕೆಯಾಗಬಹುದು ಎಂದು ತಿಳಿದು ಅದನ್ನು ತಡೆಗಟ್ಟುವ ಬಗೆಯ ಬಗ್ಗೆ ಮಾಹಿತಿ ಪಡೆಯುವುದು ಹಾಗೂ ಮಾಹಿತಿ ಪಡೆದ ನಂತರ ಅದನ್ನು ಕಾರ್ಯರೂಪಕ್ಕೆ ತರುವುದು ಎರಡನೆಯದು. ತನ್ನ ಉದ್ಯೋಗದಿಂದಾಗಿ ಯಾವುದಾದರು ಖಾಯಿಲೆ ಬರುವಂತಿದ್ದರೆ ಆ ಬಗ್ಗೆ ನಿಯಮಿತವಾಗಿ ತಪಾಸಣೆಗೊಳಗಾಗಿ ಖಾಯಿಲೆಯನ್ನು ಆದಷ್ಟು ಮೊದಲೇ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ಪಡೆಯುವುದು ಮೂರನೆಯ ಉಪಾಯ. ಯಾವ ಯಾವ ಉದ್ಯೋಗದಿಂದ ಯಾವ ಯಾವ ಖಾಯಿಲೆ ಬರಬಹುದು ಎಂಬ ಬಗ್ಗೆ ಉದ್ಯೋಗಿಗಳಿಗೆ ಸೂಕ್ತ ಮಾಹಿತಿ ಒದಗಿಸುವುದು, ಸೂಕ್ತ ವೈದ್ಯಕೀಯ ಸೌಲಭ್ಯ ಒದಗಿಸುವಂತೆ ಮಾಡುವುದು ಹಾಗೂ ತೊಂದರೆಗೊಳಗಾದವರಿಗೆ ಸೂಕ್ತ ಪರಿಹಾರ ಒದಗಿಸುವಂತೆ ಮಾಡುವುದು ಕೂಡಾ ಅಷ್ಟೇ ಪ್ರಾಮುಖ್ಯದ ವಿಷಯ, ಇದು ಸರಕಾರದ ಹಾಗೂ ಉದ್ಯೋಗದಾತರ ಜವಾಬ್ದಾರಿ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

# ಶ್ರದ್ಧಾಂಜಲಿ



ಜನನ :
25-08-1959

ನಿಧನ :
12-03-2014

## ಶ್ರೀಮತಿ ಉಷಾ ಮೋಹನ ರಾವ್

ಸ್ಥಾನೇ ಹೃಷಿಕೇಶ ತವ ಪ್ರಕೀರ್ತ್ಯಾ
ಜಗತ್ಪ್ರಹೃಷ್ಯತ್ಯನುರಜ್ಯತೇ ಚ ।
ರಕ್ಷಾಂಸಿ ಭೀತಾನಿ ದಿಶೋ ದ್ರವಂತಿ
ಸರ್ವೇ ನಮಸ್ಯಂತಿ ಚ ಸಿದ್ಧಸಂಘಾಃ ॥

ಆದರ್ಶ ಗೃಹಿಣಿಯಾಗಿ, ಮಾತೃವಾತ್ಸಲ್ಯದ ಅನುಪಮ ನಿಧಿಯಾಗಿ, ಪ್ರೀತಿಯ ಸೆಲೆಯಾಗಿ, ಅಜಾತಶತ್ರುವಾಗಿ, ಮುಗ್ಧಮನಸ್ಸಿನವಳಾಗಿ, ಎಲ್ಲರೊಳೊಂದಾಗಿ, ಉತ್ತಮ ಶಿಕ್ಷಕಿಯಾಗಿ, ನೃತ್ಯ ಮತ್ತು ಸಂಗೀತ ಸಾಂಸ್ಕೃತಿಕ ಚಟುವಟಿಕೆಗಳ ಚಿಲುಮೆಯಾಗಿ ನಗುನಗುತ್ತಾ ಬಾಳಿದ ನಿಮ್ಮ ಆದರ್ಶ ಜೀವನವೇ ನಮಗೆ ದಾರಿದೀಪ.

ಸೋಲೇ ಇಲ್ಲ ನಿನ್ನ ಹಾಡು ಹಾಡುವಾಗ
ಗೆಲುವೇ ಎಲ್ಲ ನಿನ್ನ ಪ್ರೀತಿ ಕಾಯುವಾಗ

*ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುವ,*

ವೈ. ಮೋಹನ ರಾವ್ (ಪತಿ)
ವೈ. ದೀಪಕ್‌ರಾವ್ (ಪುತ್ರ) ಪ್ರಿಯ ದೀಪಕ್ ರಾವ್ (ಸೊಸೆ)
ವೈ. ಧೀರಜ್ ರಾವ್ (ಪುತ್ರ)


**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

**ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ**

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010

ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

ಮೊಬೈಲ್- 9886629697, 9986119865

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಎಮ್. ದೇವಾನಂದ್ ಭಟ್ Cell : 9845644556
9483913344

**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

ತಂತ್ರಾಡಿ ವಿಶ್ವನಾಥ ಶಾನುಭೋಗ್ 94487 24161
97417 85551

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

**Harikrishna Digitals**

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102



**RAJESH POWER PRESS**

PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org